ಮಾನ್ಯ ಜಿಲ್ಲಾ ಪಂಚಾಯತ್ ಅಧ್ಯಕ್ಷರಾದ ಶ್ರೀಮತಿ ಸಾಕಮ್ಮ ನಾಗರಾಜು ರವರ ಅಧ್ಯಕ್ಷತೆಯಲ್ಲಿ ದಿನಾಂಕ 28-05-2014ರಂದು ಬೆಳಗ್ಗೆ 11.00 ಗಂಟೆಗೆ ಜಿಲ್ಲಾ ಪಂಚಾಯತ್ ಸಭಾಂಗಣದಲ್ಲಿ ನಡೆದ ಸಾಮಾನ್ಯ ಸಭೆಯ ನಡವಳಿಗಳು :

*******

ಹಾಜರಿ : ಹಾಜರಾತಿ ವಹಿಯಲ್ಲಿದ್ದಂತೆ.

*********

ಸಭೆಯ ಆರಂಭದಲ್ಲಿ ಉಪಕಾರ್ಯದರ್ಶಿ(ಆಡಳಿತ)ಯವರು ಮಾತನಾಡಿ, ಸಭೆಯ ಮಾನ್ಯ ಅಧ್ಯಕ್ಷರು, ಉಪಾಧ್ಯಕ್ಷರು, ಲೋಕಸಭಾ ಸದಸ್ಯರು, ವಿಧಾನಸಭಾ ಸದಸ್ಯರುಗಳು, ವಿಧಾನ ಪರಿಷತ್ ಸದಸ್ಯರು, ಜಿಲ್ಲಾ ಪಂಚಾಯತ್ ಮಾನ್ಯ ಸದಸ್ಯರುಗಳು, ತಾಲ್ಲೂಕು ಪಂಚಾಯತ್ ಅಧ್ಯಕ್ಷರುಗಳು, ಜಿಲ್ಲಾ ಪಂಚಾಯತ್ ವ್ಯಾಪ್ತಿಯ ಜಿಲ್ಲಾ/ತಾಲ್ಲೂಕು ಮಟ್ಟದ ಅಧಿಕಾರಿಗಳು ಹಾಗೂ ಪತ್ರಿಕಾ ಮಾಧ್ಯಮದವರುಗಳನ್ನು ಸಭೆಗೆ ಹೃತ್ಪೂರ್ವಕವಾಗಿ ಸ್ವಾಗತಿಸಿದರು, ಹಾಗೂ ಮಾನ್ಯ ಅಧ್ಯಕ್ಷರು ಸಭೆಯ ಕಾರ್ಯ ಕಲಾಪಗಳನ್ನು ನಡೆಸಿ ಕೊಡಬೇಕೆಂದು ವಿನಂತಿಸಿದರು.

ದಿನಾಂಕ 23-03-2014ರಂದು ಇತ್ತೀಚೆಗೆ ದೈವಾಧೀನರಾದ ಜಿಲ್ಲಾ ಪಂಚಾಯತ್ ಮಾನ್ಯ ಸದಸ್ಯರಾದ ಶ್ರೀ ಬಡೀರಣ್ಣನವರ ಗೌರವಾರ್ಥ ಸಭೆಯಲ್ಲಿ ಎರಡು ನಿಮಿಷಗಳ ಕಾಲ ಮೌನ ಆಚರಿಸುವುದರ ಮೂಲಕ ದಿವಂಗತರಿಗೆ ಶ್ರದ್ಧಾಂಜಲಿ ಅರ್ಪಿಸಲು ಮಾನ್ಯ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಯವರು ಪ್ರಸ್ತಾಪಿಸಿದರು. ಸಭೆಯ ಮಾನ್ಯ ಅಧ್ಯಕ್ಷರು, ದಿವಂಗತ ಸದಸ್ಯರಾದ ಶ್ರೀ ಬಡೀರಣ್ಣನವರ ಕುರಿತು ಸಭೆಯ ಸದಸ್ಯರುಗಳು ಕೆಲವು ನುಡಿಗಳನ್ನಾಡುವಂತೆ ಕೋರಿದರು.

ಈ ಮೇರೆಗೆ ಜಿಲ್ಲಾ ಪಂಚಾಯತ್ ಮಾನ್ಯ ಸದಸ್ಯರಾದ ಶ್ರೀ ವೈ.ಹೆಚ್.ಹುಚ್ಚಯ್ಯನವರು, ದಿವಂಗತ ಶ್ರೀ ಬಡೀರಣ್ಣನವರು ಇದ್ದಕ್ಕಿದ್ದಂತೆ ದಿವಂಗತರಾಗಿದ್ದಕ್ಕೆ ವಿಷಾಧ ವ್ಯಕ್ತಪಡಿಸುತ್ತಾ, ಅವರ ಪಕ್ಷಾತೀತ ಮನೋಭಾವ, ಸಾಮಾಜಿಕ ಮುತ್ಸದ್ದಿತನ, ಇತರೆ ಸದಸ್ಯರುಗಳೊಂದಿಗಿನ ಒಡನಾಟ, ಬಡವರ ಬಗೆಗಿನ ಕಳಕಳಿ ಹಾಗೂ ಅಲೆಮಾರಿ ಜನಾಂಗಗಳ ಕಲ್ಯಾಣದ ಬಗೆಗೆ ಸೌಲಭ್ಯ ಕಲ್ಪಿಸುವಲ್ಲಿ ಕುರಿಗಾಹಿಗಳಿಗೆ ಜೀವವಿಮೆ ಇತ್ಯಾದಿ ಯೋಜನೆಗಳ ಬಗೆಗಿನ ಅವರ ಕಳಕಳಿಯ ಹೋರಾಟದ ಕುರಿತು ಸ್ಮರಿಸಿದರು. ಈ ಕುರಿತು ಸಭೆಯಲ್ಲಿ ಉಪಸ್ಥಿತರಿದ್ದ ಮಾನ್ಯ ಸಂಸದರಾದ ಶ್ರೀ ಎಸ್.ಪಿ.ಮುದ್ದ ಹನುಮೇಗೌಡ ರವರು, ವಿಧಾನಸಭಾ ಸದಸ್ಯರುಗಳಾದ ಶ್ರೀ ಕೆ.ಎನ್.ರಾಜಣ್ಣನವರು, ಶ್ರೀ ಷಡಕ್ಷರಿಯವರು, ವಿಧಾನ ಪರಿಷತ್ ಸದಸ್ಯರಾದ ಶ್ರೀ ಹುಲಿನಾಯ್ಕರ್ ರವರು, ಜಿಲ್ಲಾ ಪಂಚಾಯತ್ ಮಾನ್ಯ ಸದಸ್ಯರುಗಳಾದ ಶ್ರೀಮತಿ ಪ್ರೇಮಾ ಮಹಲಿಂಗಪ್ಪ, ಶ್ರೀ ಸಿ.ಆರ್.ಉಮೇಶ್, ಶ್ರೀ ಚಂದ್ರಶೇಖರಬಾಬು ರವರುಗಳು ಧ್ವನಿಗೂಡಿಸಿದರು.ಶೂನ್ಯ ವೇಳೆಯ ಚರ್ಚೆಯೊಂದಿಗೆ ಸಭೆಯನ್ನು ಪ್ರಾರಂಭಿಸಿದರು.

ಮಾನ್ಯ ಸಂಸದರು, ಇತ್ತೀಚಿನ ಲೋಕಸಭಾ ಚುನಾವಣೆಯಲ್ಲಿ ಪ್ರತ್ಯಕ್ಷ-ಪರೋಕ್ಷವಾಗಿ ಸಹಕರಿಸಿ, ತಮ್ಮ ಗೆಲುವಿಗೆ ಕಾರಣೀಭೂತರಾದ ಮತದಾರರನ್ನು, ಮಾನ್ಯ ಶಾಸಕರುಗಳಿಗೆ ಕೃತಜ್ಞತೆಗಳನ್ನು ಅರ್ಪಿಸಿದರು; ಹಾಗೂ ಚುನಾಯಿತ ಪ್ರತಿನಿಧಿಗಳ ಕಾರ್ಯವ್ಯಾಪ್ತಿಯಲ್ಲಿ ತಾವು ಯಾವುದೇ ರೀತಿಯಲ್ಲಿ ಹಸ್ತಕ್ಷೇಪ ಮಾಡದೆ, ಜಿಲ್ಲೆಯನ್ನು ಒಂದು ಘಟಕವಾಗಿ ಪರಿಗಣಿಸಿ ಜಿಲ್ಲೆಯ ಸಮಗ್ರ ಅಭಿವೃದ್ಧಿಗೆ ಶ್ರಮಿಸುವುದಾಗಿ ತಿಳಿಸಿದರು. ಹಾಗೆಯೇ, ಅಧಿಕಾರಿಗಳೂ ಸಹ ಸಾರ್ವಜನಿಕ ಉತ್ತರದಾಯಿತ್ವವನ್ನು ಹೊಂದಿರುವುದರಿಂದ, ಯಾವುದೇ

ಕಾರಣಕ್ಕೂ ಫಲಾಯನವಾದ ಮಾಡದೆ, ಸಾರ್ವಜನಿಕರ ಸಮಸ್ಯೆಗಳ ಕುರಿತು ವೈಯಕ್ತಿಕ ಆಸ್ತೆ ವಹಿಸಿ ಖುದ್ದು ಸ್ಥಳಕ್ಕೆ ಭೇಟಿ ನೀಡಿ ಪರಿಶೀಲಿಸಿ, ಸಮಸ್ಯೆಯನ್ನು ಪರಿಹರಿಸುವ ನಿಟ್ಟಿನಲ್ಲಿ ಕಾರ್ಯ ನಿರ್ವಹಿಸಬೇಕು ಎಂದು ಅಧಿಕಾರಿಗಳಿಗೆ ಕಿವಿಮಾತು ಹೇಳಿದರಲ್ಲದೆ, ಅವರು ಸಹ ಅತ್ಯಂತ ಕ್ರಿಯಾಶೀಲರಾಗಿ ಜಿಲ್ಲೆಯ ಅಭಿವೃದ್ಧಿಗಾಗಿ ಕೆಲಸ ಮಾಡಲು ಎಲ್ಲರ ಸಹಕಾರ ಕೋರುವುದರ ಜೊತೆಗೆ ಎಲ್ಲರೂ ಒಗ್ಗಟ್ಟಾಗಿ ಕೆಲಸ ಮಾಡೋಣ ಎಂದು ಸಭೆಗೆ ತಿಳಿಸಿದರು.

ನಂತರ, ಶೂನ್ಯ ವೇಳೆಯ ಚರ್ಚೆಯೊಂದಿಗೆ ಸಭೆಯು ಪ್ರಾರಂಭವಾಯಿತು. ಮೊದಲಿಗೆ ಜಿ.ಪಂ. ಮಾನ್ಯ ಸದಸ್ಯರಾದ ಡಾ: ರವಿ ನಾಗರಾಜಯ್ಯನವರು, ಮಾನ್ಯ ಸಂಸದರು, ಶಾಸಕರುಗಳು, ವಿಧಾನ ಪರಿಷತ್ ಸದಸ್ಯರು ಈ ಸಭೆಯಲ್ಲಿ ಉಪಸ್ಥಿತರಿರುವುದರಿಂದ, ಜಿಲ್ಲೆಯ ಜ್ವಲಂತ ಸಮಸ್ಯೆಗಳ ಬಗ್ಗೆ (ಬರ, ಕೃಷಿ ಬೆಳೆ ಹಾನಿ, ತೋಟಗಾರಿಕೆ ಬೆಳೆ ಹಾನಿ, MGNREGA ಸಮಸ್ಯೆ ಇತ್ಯಾದಿ)ಬೆಳಕು ಚೆಲ್ಲಿದಲ್ಲಿ ಅವರುಗಳು ವಿಧಾನಸಭಾ/ಸಂಸತ್ ಅಧಿವೇಶನದಲ್ಲಿ ಚರ್ಚಿಸಿ, ಕೇಂದ್ರ ಮತ್ತು ರಾಜ್ಯ ಸರ್ಕಾರಗಳಿಂದ ಅನುದಾನ ಬಿಡುಗಡೆಮಾಡಿಸಿದಲ್ಲಿ ಸಮಸ್ಯೆಗಳಿಗೆ ಪರಿಹಾರ ಕಂಡುಕೊಳ್ಳಬಹುದಲ್ಲವೆ? ಎಂದು ಅಭಿಪ್ರಾಯ ವ್ಯಕ್ತಪಡಿಸಿದರು.

ಜಿ.ಪಂ.ಮಾನ್ಯ ಸದಸ್ಯರಾದ ಶ್ರೀ ಸಿ.ಆರ್.ಉಮೇಶ್ ರವರು, ಕೃಷಿ ಮತ್ತು ತೋಟಗಾರಿಕೆ ಬೆಳೆಹಾನಿಗೆ ಸಂಬಂಧಿಸಿದಂತೆ ಕಳೆದ ವರ್ಷದ ವರದಿಯ ಮೇರೆಗೆ ರೂ. 25.21ಕೋಟಿ ಅನುದಾನ ಬಿಡುಗಡೆಯಾಗಿರುತ್ತದೆ; 20,07,828ಹೆ. ಪ್ರದೇಶದಲ್ಲಿ ಬಿತ್ತನೆಯಾಗಿದ್ದು, ಶೇ.50ಕ್ಕೂ ಅಧಿಕ ಪ್ರಮಾಣದಲ್ಲಿ ಬೆಳೆ ನಾಶವಾಗಿದ್ದು, ರೂ.28.49 ಕೋಟಿ ಪರಿಹಾರಧನ ಬಿಡುಗಡೆಯಾಗಿರುತ್ತದೆ; ಕೇಂದ್ರ ಸರ್ಕಾರದ ಮಾರ್ಗಸೂಚಿಯ ಮೇರೆಗೆ ಕೃಷಿ ಬೆಳೆ ಹಾನಿಗೆ ಪ್ರತಿ ಎಕರೆಗೆ ರೂ.4,500/-ರಂತೆ ಒಟ್ಟು ರೂ.53.65ಕೋಟಿ ಪರಿಹಾರಧನ ಬಿಡುಗಡೆಗೆ ಕೋರಿ ಸರ್ಕಾರಕ್ಕೆ ಬೇಡಿಕೆ ನೀಡಲಾಗಿತ್ತು; ಆದರೆ ಈ ವರೆಗೆ ಕೇವಲ ರೂ.17.40ಕೋಟಿ ಮಾತ್ರ ಬಿಡುಗಡೆಯಾಗಿದ್ದು, ಇನ್ನೂ ರೂ.36.25 ಕೋಟಿ ಅನುದಾನ ಬಿಡುಗಡೆಯಾಗಬೇಕಾಗಿದೆ; ಅದರಂತೆ, ತೋಟಗಾರಿಕೆ ಇಲಾಖೆಗೆ ಸಂಬಂಧಿಸಿದಂತೆ, ಬಹುವಾರ್ಷಿಕ/ ವಾರ್ಷಿಕ ಬೆಳೆ ಕಾರ್ಯಕ್ರಮದಡಿ ಒಟ್ಟಾರೆ 54835ಹೆ. ಪ್ರದೇಶದಲ್ಲಿ ಬೆಳೆಯಲಾಗಿದ್ದ ತೆಂಗು, ಅಡಿಕೆ, ಸಪೋಟ, ಮಾವಿನಕಾಯಿ, ವಿಳೆದೆಲೆ, ಪಪ್ಪಾಯ ಬೆಳೆಗಳು ಹಾನಿಯಾಗಿದ್ದು, ಈ ಸಂಬಂಧ ಬಹುವಾರ್ಷಿಕ ಬೆಳೆಹಾನಿಗೆ ಪ್ರತಿ ಹೆಕ್ಟೇರ್ ಗೆ ರೂ.12.000/-ದಂತೆ ಮತ್ತು ವಾರ್ಷಿಕ ಬೆಳೆಹಾನಿಗೆ ಪ್ರತಿ ಹೆಕ್ಟೇರ್ ಗೆ ರೂ.9,000/-ದಂತೆ ಒಟ್ಟು ರೂ. 64.69ಕೋಟಿ ಪರಿಹಾರ ಬೇಡಿಕೆ ಸಲ್ಲಿಸಲಾಗಿತ್ತು; ಆದರೆ ಈ ಪೈಕಿ ಕೇವಲ ರೂ. 7.81ಕೋಟಿ ಮಾತ್ರ ಬಿಡುಗಡೆಯಾಗಿರುತ್ತದೆ; ಒಟ್ಟಾರೆ ಜಿಲ್ಲೆಯ ಕೃಷಿ ಮತ್ತು ತೋಟಗಾರಿಕೆ ಬೆಳೆಹಾನಿಗೆ ರೂ.118.34 ಕೋಟಿ ಬೆಳೆ ಪರಿಹಾರಕ್ಕೆ ಬೇಡಿಕೆ ಸಲ್ಲಿಸಲಾಗಿದ್ದು, ಈವರೆಗೆ ಕೇವಲ ರೂ.25.21ಕೋಟಿ (ಕೃಷಿ ರೂ.17.40 ಕೋಟಿ + ತೋಟಗಾರಿಕೆ ರೂ.7.81 ಕೋಟಿ= ರೂ.25.21 ಕೋಟಿ) ಮಾತ್ರ ಪರಿಹಾರಧನ ಬಿಡುಗಡೆಯಾಗಿದ್ದು, ಇನ್ನೂ ರೂ.93.50 ಕೋಟಿ ಅನುದಾನ ಕೇಂದ್ರಸರ್ಕಾರದಿಂದ ಬಿಡುಗಡೆಯಾಗ ಬೇಕಾಗಿರುತ್ತದೆ ಎಂದು ಸಭೆಗೆ ವಿವರಿಸಿದರು. ನಂತರ, ಪರಿಹಾರಧನವು ಮಾನ್ಯ ಜಿಲ್ಲಾಧಿಕಾರಿಯವರಿಂದ ತಾಲ್ಲೂಕು ತಹಶೀಲ್ದಾರ್ ಗಳಿಗೆ ಬಿಡುಗಡೆಯಾಗಿ, ತಹಶೀಲ್ದಾರ್ ರವರಿಂದ ಫಲಾನುಭವಿಗಳಿಗೆ ಹಂಚಿಕೆಯಾಗುತ್ತದೆ; ಪ್ರಸ್ತುತ ಸಮರ್ಪಕವಾಗಿ ಹಂಚಿಕೆ ಯಾಗುತ್ತಿಲ್ಲ ಎಂದು ಆಕ್ಷೇಪಿಸಿ, ಆಧ್ಯತೆ ಮೇರೆಗೆ ಅತಿ ಸಣ್ಣ ರೈತರು, ಸಣ್ಣ ರೈತರಂತೆ ದೊಡ್ಡ ರೈತರಿಗೂ ಸಹ ಪರಿಹಾರಧನ ಹಂಚಿಕೆ ಮಾಡಬೇಕೆಂದು ಅಭಿಪ್ರಾಯ ವ್ಯಕ್ತಪಡಿಸಿದರು. ಹಾಗೂ ಬೆಳೆ ಪರಿಹಾರಕ್ಕೆ ಘೋರಕ್ ಸಿಂಗ್ ವರದಿಯನ್ನು

ಮಾರ್ಪಡಿಸಿ ಪಕ್ಕದ ಕೇರಳ ರಾಜ್ಯದ ಮಾದರಿಯಲ್ಲಿ ಪರಿಹಾರಧನ ಕೊಡಿಸಿಕೊಡಲು ಪ್ರಯತ್ನ ಮಾಡಬೇಕು; ಹಾಗೂ ಪರಿಹಾರ ವಿತರಣೆಗೆ ನಿರ್ಧಿಷ್ಟ ಮಾರ್ಗಸೂಚಿ ಇಲ್ಲದಿರುವ ಕಾರಣ ಫಲಾನುಭವಿಗಳನ್ನು ಅತಿಸಣ್ಣ, ಸಣ್ಣ ಮತ್ತು ದೊಡ್ಡ ರೈತರೆಂದು ತಾರತಮ್ಯವೆಸಗದೆ ಎಲ್ಲರನ್ನೂ ಸಮಾನವಾಗಿ ಪರಿಗಣಿಸಿ ತುರ್ತಾಗಿ ಪರಿಹಾರ ವಿತರಣೆ ಮಾಡಬೇಕೆಂದು ತಿಳಿಸಿದರು. ಈ ಮಾತಿಗೆ ಮಾನ್ಯ ಸದಸ್ಯರಾದ ಡಾ: ರವಿ ನಾಗರಾಜಯ್ಯನವರು ಧ್ವನಿಗೂಡಿಸಿದರು.

ವಿಧಾನ ಪರಿಷತ್ ಮಾನ್ಯ ಸದಸ್ಯರಾದ ಶ್ರೀ ಹುಲಿನಾಯ್ಕರ್ ರವರು, 1000 ತೆಂಗಿನ ಮರ ಇರುವ ತೋಟ ಪೂರ್ಣ ಹಾಳಾಗಿರುವುದಕ್ಕೆ ಶಾಶ್ವತ ಪರಿಹಾರ ಕೊಡಬೇಕು; ತೆಂಗು, ಅಡಿಕೆ, ಹಣ್ಣಿನ ಮರಗಳು ಹಾನಿಯಾಗಿರುವುದಕ್ಕೆ ಪರ್ಯಾಯ ವ್ಯವಸ್ಥೆ ಮಾಡಬೇಕು, ಹಾನಿಗೆ ತಕ್ಕ ಪ್ರಮಾಣದಲ್ಲಿ ರೈತರಿಗೆ ಪರಿಹಾರ ಕೊಡಬೇಕು ಎಂಬ ಮೂರು ಬಗೆಯ ಬೇಡಿಕೆಗಳನ್ನು ಸರ್ಕಾರದ ತಂಡದ ಗಮನಕ್ಕೆ ತಂದಿದ್ದು, ಅದರಂತೆ ತಂಡವು, ತಂಗಿನಮರ ಹೋದಲ್ಲಿ ಪರ್ಯಾಯವಾಗಿ ಬೇರೆ ಸಸಿ ನೆಡಲು ವ್ಯವಸ್ಥೆ ಮಾಡಿ, ನೀತಿ ಸರಳೀಕರಣ ಮಾಡಿ ಪರಿಹಾರ ಜಾರಿಗೆ ತರಲು ಸರ್ಕಾರಕ್ಕೆ ಶಿಫಾರಸು ಮಾಡಬೇಕು ಎಂದು ಸಭೆಗೆ ತಿಳಿಸಿದರು; ಬಿಡುಗಡೆಯಾದ ಅನುದಾನವನ್ನು ಒಂದು ವಾರದಲ್ಲಿ ವಿತರಿಸಿದರೆ ಬೀಜ ಗೊಬ್ಬರಕ್ಕಾದರೂ ಸಹಾಯವಾಗುತ್ತದೆಯಾದ್ದರಿಂದ ತಕ್ಷಣ ವಿತರಣೆ ಮಾಡಬೇಕೆಂದು ADCಯವರನ್ನು ಕೋರಿದರು.

ಮಾನ್ಯ ಶಾಸಕರಾದ ಶ್ರೀ ಷಡಕ್ಷರಿಯವರು, ತಾವೂ ಕೂಡ ತಂಡದೊಂದಿಗೆ ಇದ್ದು, ಬೆಳೆ ನಾಶದ ಸಂಬಂಧ ಹೆಕ್ಟೇರುವಾರು ಸರ್ವೆ ಮಾಡಿಸಿ ಪರಿಹಾರ ನೀಡಿದರೆ ರೈತರಿಗೆ ಅನುಕೂಲವಾಗುತ್ತದೆ ಯಾದ್ದರಿಂದ ಕೇರಳ ರಾಜ್ಯದ ಮಾದರಿಯಲ್ಲಿ ಪರಿಹಾರ ಕೊಡಿ ಎಂದು ತಂಡಕ್ಕೆ ಮನವರಿಕೆ ಮಾಡಿಸಿದ್ದಾಗ್ಯೂ ಅವರು ಈ ರೀತಿ ಏಕೆ ಮಾಡಿದ್ದಾರೋ ಗೊತ್ತಿಲ್ಲ; ಆದ್ದರಿಂದ ಮಾನ್ಯ ಸಂಸದರು ಈ ಕುರಿತು ಗಮನಹರಿಸಿ, ಸಂಬಂಧಪಟ್ಟವರೊಂದಿಗೆ ಚರ್ಚಿಸಿ, ತೆಂಗು, ಅಡಿಕೆ, ಸಪೋಟ ಬೆಳೆ ನಾಶಕ್ಕೆ ಸೂಕ್ತ ಪರಿಹಾರ ಕೊಡಿಸಲು ಪ್ರಾಮಾಣಿಕ ಪ್ರಯತ್ನ ಮಾಡಿ ಕೇಂದ್ರ ಸರ್ಕಾರದಿಂದ ಅನುದಾನ ಬಿಡುಗಡೆ ಮಾಡಿಸಲು ಪ್ರಯತ್ನ ಮಾಡಿದರೆ ಅನುಕೂಲವಾಗುತ್ತದೆ ಎಂದು ಸಭೆಗೆ ತಿಳಿಸಿದರು.

ಜಿ.ಪಂ.ಮಾನ್ಯ ಸದಸ್ಯರಾದ ಶ್ರೀಮತಿ ಲಲಿತಾ ನಿಂಗಪ್ಪನವರು, ಪರೋಪಜೀವಿಗಳನ್ನು ಬಿಡುವುದರ ಮೂಲಕ ಮುಂಜಾಗ್ರತಾ ಕ್ರಮಗಳನ್ನನುಸರಿಸಿ ಬೆಳೆ ಹಾನಿಯನ್ನು ತಡೆಗಟ್ಟಬಹುದು; ಹಾಗೆಯೇ, ತೆಂಗಿನ ಪರಾವಲಂಬಿಗಳಿಂದ ತೋಟಗಾರಿಕಾ ಬೆಳೆ ಹಾನಿಗೆ ಪರಿಹಾರ ಒದಗಿಸಲು ಕೇಂದ್ರಸರ್ಕಾರದ ಮಟ್ಟದಲ್ಲಿ ಕ್ರಮವಹಿಸಿದರೆ ಅನುಕೂಲವಾಗುತ್ತದೆ ಎಂದು ಅಭಿಪ್ರಾಯ ವ್ಯಕ್ತಪಡಿಸಿದರು. ಹಾಗೂ ಪರೋಪ ಜೀವಿಗಳನ್ನು ಯಾವುದೇ ಒಂದು ಭಾಗಕ್ಕೆ ಬಿಡದೆ ಸರ್ವವ್ಯಾಪಿಯಾಗಿ ಬಿಡಬೇಕೆಂದು ತಿಳಿಸಿದರು.

ಉಪ ನಿರ್ದೇಶಕರು, ತೋಟಗಾರಿಕೆ ಇಲಾಖೆ, ತುಮಕೂರು ಇವರು, ತೋಟಗಾರಿಕೆ ಇಲಾಖೆಯ ಆಯುಕ್ತರಾದ ಶ್ರೀ ಫೋರಾಕ್ ಸಿಂಗ್ ರವರು ಸಂಬಂಧಪಟ್ಟ ಮಾನ್ಯ ಸಂಸದರು, ಶಾಸಕರು ಮತ್ತು ವಿಧಾನ ಪರಿಷತ್ ಸದಸ್ಯರೊಂದಿಗೆ ತುಮಕೂರು ಜಿಲ್ಲೆಯ ಗುಬ್ಬಿ ಮತ್ತು ತಿಪಟೂರು ತಾಲ್ಲೂಕುಗಳಿಗೆ ಭೇಟಿ ನೀಡಿ ತೋಟಗಾರಿಕಾ ಬೆಳೆ ಹಾನಿಯ ಬಗ್ಗೆ ಪರಿಶೀಲಿಸಿ ವರದಿ ನೀಡಿರುತ್ತಾರೆ; ಕಳೆದ ಸಾಲಿಗಿಂತ ಈ ಸಾಲಿಗೆ ಪರಿಹಾರ ನೀತಿಯನ್ನು ಸರಳೀಕರಿಸಲಾಗಿದೆ; ಆದಾಗ್ಯೂ, ಕೇರಳ ರಾಜ್ಯದ ಮಾದರಿಯಲ್ಲಿ ಪರಿಹಾರ ನೀಡಲು ಕೋರಿ ಕೇಂದ್ರ ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಲಾಗಿದೆ; ಬರಗಾಲಕ್ಕೆ ಜಿಲ್ಲೆಯಲ್ಲಿ 75678 ತೆಂಗಿನ ಮರಗಳು ಹಾನಿಯಾಗಿದ್ದು,

93323 ಮಂದಿ ರೈತರ ಒಟ್ಟು 54375 ಹೆಕ್ಟೇರ್ ಪ್ರದೇಶದಲ್ಲಿ ವಿವಿಧ ಬೆಳೆಗಳ ತೋಟಗಾರಿಕಾ ಬೆಳೆಹಾನಿಯಾಗಿದೆ ಎಂದು ಸಭೆಗೆ ತಿಳಿಸಿದರು.

ಜಿ.ಪಂ.ಮಾನ್ಯ ಸದಸ್ಯರಾದ ಶ್ರೀ ಆನಂದರವಿಯವರು, ಅಂತರ್ಜಲ ಕುಸಿತದಿಂದಾಗಿ ತಿಪಟೂರು ತಾಲ್ಲೂಕಿನಲ್ಲಿ ತೋಟಗಾರಿಕಾ ಬೆಳೆ ಹಾನಿ ಸರ್ವೇ ಸಾಮಾನ್ಯವಾಗಿದೆ; ಕಪ್ಪುತಲೆ ಹುಳು ರೋಗ ನಿವಾರಣೆಗೆ ಕೀಟನಾಶಕ ಸಿಂಪಡಣೆ ಬಗ್ಗೆ ಅಧಿಕಾರಿಗಳು ಗಮನಹರಿಸಬೇಕು; ಚಿಕ್ಕನಾಯಕನಹಳ್ಳಿ, ತಿಪಟೂರು ಮತ್ತು ತುರುವೇಕೆರೆ ಭಾಗಗಳಲ್ಲಿ ಈ ರೋಗ ಜಾಸ್ತಿಯಿರುವುದರಿಂದ ಈ ಕುರಿತು ಚರ್ಚಿಸಿ, ರೋಗ ನಿವಾರಣೆಗೆ ಯೋಗ್ಯ ಔಷಧಿಯನ್ನು ಕೇಂದ್ರ ಸರ್ಕಾರದಿಂದ ತರಿಸಿ ರೋಗ ನಿಯಂತ್ರಣಕ್ಕೆ ಹೆಚ್ಚಿನ ಒತ್ತು ನೀಡಿ ಸಹಕರಿಸಬೇಕು ಎಂದು ಕೋರಿದರು. ಪ್ರತಿಯಾಗಿ ತೋಟಗಾರಿಕಾ ಉಪನಿರ್ದೇಶಕರು, ತೆಂಗಿನ ಗಿಡಗಳಲ್ಲಿ ಕಂಡುಬರುವ ಕಪ್ಪುತಲೆ ಹುಳು ರೋಗವನ್ನು ತಡೆಗಟ್ಟುವಲ್ಲಿ ರೈತರಿಗೆ ಅರಿವು ಮೂಡಿಸಿ, ತಮ್ಮ-ತಮ್ಮ ತೋಟಗಳಲ್ಲಿ ಬೆಳೆಸಲು ಪರೋಪ ಜೀವಿಗಳನ್ನು ನೀಡಲಾಗಿದೆ ಎಂದು ತಿಳಿಸಿದರು. ಮಾನ್ಯ ಸದಸ್ಯರು ಮುಂದುವರಿದು, ಮೂರು ಎಕರೆ ತೆಂಗಿನ ತೋಟ ಇರುವೆಡೆ 100 ಪರೋಪ ಜೀವಿಗಳನ್ನು ಬಿಟ್ಟರೆ ಪ್ರಯೋಜನವಾಗುವುದಿಲ್ಲ ಹಾಗೂ 2-3 ತಿಂಗಳುಗಳ ಹಿಂದೆಯೇ ಬಿಟ್ಟಿದ್ದರೂ ಸಹ ರೋಗ ನಿಯಂತ್ರಣವಾಗುವುದಿಲ್ಲ; ಕೆಲವು ಸಂದರ್ಭಗಳಲ್ಲಿ ಪರೋಪ ಜೀವಿ ದಾಸ್ತಾನು ಇರುವುದಿಲ್ಲ ಎಂದು ಸಭೆಯ ಗಮನಕ್ಕೆ ತಂದರು.

ಜಿ.ಪಂ.ಮಾನ್ಯ ಸದಸ್ಯರಾದ ಶ್ರೀ ಚಂದ್ರಶೇಖರಬಾಬು ರವರು, ಗ್ರಾಮ ಪಂಚಾಯಿತಿಗಳಲ್ಲಿ ಕಾಲ-ಕಾಲಕ್ಕೆ ಸಭೆಗಳನ್ನು ನಡೆಸುವುದಿಲ್ಲ; ರೈತರಲ್ಲಿ ಅರಿವು ಮೂಡಿಸುವುದಿಲ್ಲ; ಇದರಿಂದಾಗಿ ರೈತರು ತೋಟಗಾರಿಕಾ ಬೆಳೆಗೆ ಅತಿಯಾಗಿ ಕೀಟ ನಾಶಕಗಳನ್ನು ಸಿಂಪಡಿಸುತ್ತಾರೆ; ಗುಬ್ಬಿ ತಾಲ್ಲೂಕಿನ ಸುತ್ತ-ಮುತ್ತ ರೈತರು ದಾಳಿಂಬೆ ಬೆಳೆಯುತ್ತಿದ್ದಾರೆ; ಬೆಳೆಯ ಇಳುವರಿ ಜಾಸ್ತಿಯಾದಂತೆ ಬೆಲೆ ಕುಸಿಯುತ್ತಿದೆ; ಇಲಾಖಾಧಿಕಾರಿಗಳು ಸಮರ್ಪಕ ಮಾಹಿತಿ ನೀಡುವುದಿಲ್ಲ; ಆದುದರಿಂದ, ಎಲ್ಲ ಚುನಾಯಿತ ಪ್ರತಿನಿಧಿ ಗಳು, ಇಲಾಖಾ ಅಧಿಕಾರಿಗಳು ಎಲ್ಲರೂ ಕೃಷಿ ಮತ್ತು ತೋಟಗಾರಿಕೆ ಬೆಳೆ ಬೆಳೆಯುವಲ್ಲಿ ರೈತರಿಗೆ ಒಳ್ಳೆಯ ಮಾರ್ಗದರ್ಶನ ನೀಡಿ ಸಹಕರಿಸಬೇಕೆಂದು ವಿನಂತಿಸಿದರು. ಪೂರಕವಾಗಿ ತಿಪಟೂರು ವಿಧಾನಸಭಾ ಕ್ಷೇತ್ರದ ಮಾನ್ಯ ಶಾಸಕರು, ಸರ್ಕಾರ ಈ ಬಾರಿ ರೈತನ ಎಲ್ಲ ಬೆಳೆಗಳಿಗೂ ಪ್ರೋತ್ಸಾಹಧನ ನೀಡಿದೆ ಎಂದು ತಿಳಿಸಿದರಲ್ಲದೆ, ಇತ್ತೀಚೆಗೆ ಬಹಳಷ್ಟು ಕಡೆಗಳಲ್ಲಿ ದಾಳಿಂಬೆ ಬೆಳೆಯುತ್ತಿದ್ದು, ಈ ಬಾರಿಯ ಅಧಿವೇಶನ ಮುಗಿಯುವುದರೊಳಗೆ ಸದರಿ ಬೆಳೆಗೂ ಪ್ರೋತ್ಸಾಹಧನ ನೀಡುವಂತೆ ತಾವು ಪ್ರೋತ್ಸಾಹಿಸುವುದಾಗಿ ಭರವಸೆಯಿತ್ತರು.

ಜಿ.ಪಂ.ಮಾನ್ಯ ಸದಸ್ಯರಾದ ಶ್ರೀಮತಿ ಶಾಂತಲ ರಾಜಣ್ಣನವರು, ಕಪ್ಪುತಲೆ ಹುಳು ರೋಗ ನಿಯಂತ್ರಣಕ್ಕೆ ರೈತರಿಗೆ ಕೀಟ ನಾಶಕ ವಿತರಣೆಯಾಗಬೇಕು; ಜೈವಿಕವಾಗಿ ಬೆಳ್ಳುಳ್ಳಿ ಮತ್ತು ಸೋಪು ಮಿಶ್ರಣ ಮಾಡಿ ಸಿಂಪಡಿಸಿದಾಗ ರೋಗ ಕಡಿಮೆಯಾಗುತ್ತಿತ್ತು; ಪರೋಪಜೀವಿಗಳನ್ನು ಅಗತ್ಯತೆಗನುಗುಣ ವಾಗಿ ಒಂದೇ ಬಾರಿಗೆ ಬಿಟ್ಟರೆ ಅನುಕೂಲವಾಗುತ್ತದೆ ಎಂದು ತಿಳಿಸಿದರಲ್ಲದೆ, ಯಾವ ಅಧಿಕಾರಿಗಳೂ ಸರಿಯಾಗಿ ಫೀಲ್ಡ್ ವರ್ಕ್ ಮಾಡುತ್ತಿಲ್ಲವೆಂದು ಆಪಾದಿಸಿ, ಕೃಷಿ ಮತ್ತು ತೋಟಗಾರಿಕಾ ಇಲಾಖೆಗಳ ಅಧಿಕಾರಿಗಳಿಗೆ ಫೀಲ್ಡ್ ವರ್ಕ್ ಬಗ್ಗೆ ಸೂಕ್ತ ನಿರ್ದೇಶನ ನೀಡಬೇಕೆಂದು ಸಭೆಯ ಗಮನಕ್ಕೆ ತಂದರು.

ಈ ಸಂಬಂದ ಸಭೆಯಲ್ಲಿ ಉಪಸ್ಥಿತರಿದ್ದ ಮಾನ್ಯ ಜಿಲ್ಲಾಧಿಕಾರಿಯವರ ಕೇಂದ್ರಸ್ಥಾನಿಕ ಸಹಾಯಕರು, 2013-14ನೇ ಸಾಲಿನಲ್ಲಿ ಕೃಷಿ ಮತ್ತು ತೋಟಗಾರಿಕಾ ಬೆಳೆ ಹಾನಿಗೆ ಸಂಬಂಧಿಸಿದಂತೆ ಒಟ್ಟು ರೂ. 118.34 ಕೋಟಿ ಪರಿಹಾರಧನ ಬೇಡಿಕೆಗೆ ಈ ವರೆಗೆ ರೂ. 25.21 ಕೋಟಿ ಅನುದಾನ ಬಿಡುಗಡೆಯಾಗಿರುತ್ತದೆ; ಈ ಸಂಬಂಧ

ಜಂಟಿ ಕೃಷಿ ನಿರ್ದೇಶಕರು, ತೋಟಗಾರಿಕಾ ಉಪ ನಿರ್ದೇಶಕರು ಮತ್ತು ತಾಲ್ಲೂಕು ತಹಶೀಲ್ದಾರರುಗಳ ಸಭೆ ಕರೆದು ಸೂಕ್ತ ಸೂಚನೆ ನೀಡಿ ಹಣ ಬಿಡುಗಡೆ ಮಾಡಲಾಗಿದೆ; ಅತಿ ಸಣ್ಣ, ಸಣ್ಣ ಹಾಗೂ ದೊಡ್ಡ ರೈತರಿಗೆ ವಿತರಣೆ ಮಾಡಲು ತಿಳಿಸಲಾಗಿದೆ; ಈ ಬಾರಿ ಮಾರ್ಗಸೂಚಿಯಲ್ಲಿನ ನಿಗಧಿಯಂತೆ, ನಿಗಧಿಯಾಗಿರುವ ಪರಿಹಾರಧನವನ್ನು RTGS ಅಡಿ ಸಂಬಂಧ ಪಟ್ಟ ಫಲಾನುಭವಿಗಳ ಬ್ಯಾಂಕ್ ಖಾತೆಗೆ ಜಮೆ ಮಾಡಲಾಗುವುದು; ಈ ಸಂಬಂಧ ಬ್ಯಾಂಕ್ ಖಾತೆ ಸಂಖ್ಯೆಗಳನ್ನು ಸಂಗ್ರಹಿಸಿ ಪಟ್ಟಿ ಸಲ್ಲಿಸುವಂತೆ ಸಂಬಂಧಪಟ್ಟ ಜಂಟಿ ಕೃಷಿ ನಿರ್ದೇಶಕರು, ತೋಟಗಾರಿಕಾ ಉಪನಿರ್ದೇಶಕರಿಗೆ ಸೂಚನೆ ನೀಡಲಾಗಿದೆ ಎಂದು ಸಭೆಗೆ ತಿಳಿಸಿದರು.

ಜಿ.ಪಂ.ಮಾನ್ಯ ಸದಸ್ಯರಾದ ಡಾ: ರವಿ ನಾಗರಾಜಯ್ಯನವರು, ಫಲಾನುಭವಿಗಳನ್ನು ಗುರುತಿಸುವಲ್ಲಿ ಗ್ರಾಮ ಮಟ್ಟದಲ್ಲಿ ಗ್ರಾಮ ಲೆಕ್ಕಿಗರ ಮೇಲೆ ನಿಗಾ ಇಡಬೇಕು; ಅವರುಗಳಿಗೆ ಅತಿ ಸಣ್ಣ ಮತ್ತು ಸಣ್ಣ ಹಿಡುವಳಿದಾರರುಗಳು ಕಾಣುವುದೇ ಇಲ್ಲ; ಆದುದರಿಂದ ಈ ಕುರಿತು ಹೆಚ್ಚಿನ ಕಾಳಜಿ ವಹಿಸಬೇಕು ಎಂದು ತಿಳಿಸಿದರು; ಗೋರಕ್ ಸಿಂಗ್ ವರದಿ ಅವೈಜ್ಞಾನಿಕ, ಹಾಳಾದ ಗಿಡ ತೆಗೆದು ಹೊಸದಾಗಿ ನೆಟ್ಟ ಗಿಡಗಳಿಗೆ ಪರಿಹಾರ ರೂ. 2,000/- ನೀಡಲಾಗುತ್ತಿದೆ; ಇದನ್ನು ಕೇರಳ ಮಾದರಿಯಲ್ಲಿ ಇಲ್ಲಿ ನೀಡಿರುವುದಿಲ್ಲ; ಈ ಬಗ್ಗೆ ಕೇಂದ್ರ ಸರ್ಕಾರಕ್ಕೆ ರಾಜ್ಯದಿಂದ ಮನವಿ ಮಾಡಿ ಹೆಚ್ಚಿನ ಹಣ ಬಿಡುಗಡೆಗೆ ಸರ್ಕಾರ ಪ್ರಯತ್ನಿಸಬೇಕು ಎಂದು ತಿಳಿಸಿದರು.

ಜಿ.ಪಂ.ಮಾನ್ಯ ಸದಸ್ಯರಾದ ಶ್ರೀ ಮಣಿಕೆರೆ ನಾಗರಾಜು ರವರು, ಕೆಲವೆಡೆ ಬೆಳೆ ಬೆಳೆಯದ ರೈತರೂ ಸಹ ಪರಿಹಾರಧನವನ್ನು ಪಡೆದುಕೊಂಡಿದ್ದಾರೆ ಎಂದು ಸಭೆಯ ಗಮನಕ್ಕೆ ತಂದರು; ಈ ಕುರಿತು random check ಮಾಡಿಸುವುದಾಗಿ ಜಿಲ್ಲಾಧಿಕಾರಿಯವರ ಕೇಂದ್ರಸ್ಥಾನಿಕ ಸಹಾಯಕರು ಸಭೆಗೆ ತಿಳಿಸಿದರು.

ಜಿ.ಪಂ.ಮಾನ್ಯ ಸದಸ್ಯರಾದ ಶ್ರೀ ಸಿ.ಆರ್.ಆಂಜನಪ್ಪನವರು, ಮಧುಗಿರಿ ವಿಭಾಗ ವ್ಯಾಪ್ತಿಯಲ್ಲಿ ಅವಶ್ಯವಾಗಿ ಗೋ-ಶಾಲೆಗಳನ್ನು ತೆರೆಯಬೇಕು; ಶೇಂಗಾ ಬೆಳೆವ್ಯಾಪ್ತಿ ದಿನದಿಂದ ದಿನಕ್ಕೆ ಗಣನೀಯವಾಗಿ ಇಳಿಮುಖವಾಗುತ್ತಿದೆ; ಇದರಿಂದಾಗಿ ಶೇಂಗಾ ಬೆಳೆಗೆ ಹೆಚ್ಚಿನ ಒತ್ತು ನೀಡಿ, ಹೆಚ್ಚಿನ ಸಂಖ್ಯೆಯಲ್ಲಿ ಶೇಂಗಾ ಬೀಜ ವಿತರಿಸಬೇಕು; ಕುಡಿಯುವ ನೀರಿನ ಕುರಿತು ಮಾನ್ಯ ಜಿಲ್ಲಾಧಿಕಾರಿಯವರು ನೀಡಿರುವ ವರದಿಯನ್ನು ನೋಡಿ ಬಹಳ ಆತಂಕವಾಗುತ್ತಿದೆ ಎಂದು ತಿಳಿಸಿ, ನೀರಿನ ಸಮಸ್ಯೆಯನ್ನು ಪರಿಹರಿಸಿಕೊಡಬೇಕು; ಹಾಗೂ ಕುಡಿಯುವ ನೀರು ಪೂರೈಕೆಗಾಗಿ ಯಾವ-ಯಾವ ತಾಲ್ಲೂಕಿಗೆ ಎಷ್ಟು ಅನುದಾನ ನೀಡಲಾಗಿದೆ ಎಂಬ ಬಗ್ಗೆ ಮಾಹಿತಿ ಒದಗಿಸಬೇಕು ಎಂದು ಕೋರಿದರು.

ಜಿಲ್ಲಾಧಿಕಾರಿಯವರ ಕೇಂದ್ರಸ್ಥಾನಿಕ ಸಹಾಯಕರು, ತೋಟಗಾರಿಕೆ ಇಲಾಖೆಯಡಿ ಪರಿಹಾರಧನ ಮೊತ್ತ ಕಡಿಮೆಯಿರುವುದರಿಂದ, ಮಾನ್ಯ ಶಾಸಕರುಗಳ ಅಭಿಪ್ರಾಯ ಪಡೆದು ನಂತರ ವಿತರಣೆಗೆ ಕ್ರಮವಹಿಸ ಲಾಗುವುದೆಂದು ಸಭೆಯ ಗಮನಕ್ಕೆ ತಂದರು.

ಮಾನ್ಯ ಸಂಸದರು, ಬೆಳೆ ನಷ್ಟ ಪರಿಹಾರ ಪಡೆಯುವುದೂ ಒಂದು ಕಲೆ; ಈ ನಿಟ್ಟಿನಲ್ಲಿ ಸಮಿತಿಯ ನೇತೃತ್ವದ ತಜ್ಞರು ಮತ್ತು ಅಧಿಕಾರಿಗಳು ತೆಂಗಿನ ಮಹತ್ವದ ಬಗ್ಗೆ ಮಾನ್ಯ ಆಯುಕ್ತರಿಗೆ (ಘೋರಾಕ್ ಸಿಂಗ್) ಪೂರಕ ಮಾಹಿತಿ ನೀಡಿಬೇಕಾಗಿತ್ತು; ಬೆಳೆ ಹಾನಿಗೆ ಒಳಗಾಗಿರುವ ವ್ಯಕ್ತಿಯನ್ನು ಗಮನದಲ್ಲಿಟ್ಟು ಕೊಂಡು ವೈಜ್ಞಾನಿಕವಾಗಿ ವರದಿ ತಯಾರಿಸಬೇಕಾಗಿತ್ತು ಎಂದು ತಿಳಿಸಿದರಲ್ಲದೆ, ಈ ಕುರಿತು ಕೇಂದ್ರ ಸರ್ಕಾರಕ್ಕೆ ಯಾವ ರೀತಿ ಮನವರಿಕೆ ಮಾಡಿಸಬಹುದೆಂಬ ಬಗ್ಗೆ ಒಂದು ವಾರದಲ್ಲಿ ವಿವರವಾದ ವರದಿಯನ್ನು ನೀಡಿದಲ್ಲಿ ಕೇಂದ್ರ ಸರ್ಕಾರದ ಗಮನ ಸೆಳೆಯಲು ಪ್ರಯತ್ನಪಡುವುದಾಗಿ ಸಭೆಗೆ ಭರವಸೆಯಿತ್ತರು.

ಈ ಬಗ್ಗೆ ಮಾನ್ಯ ಶಾಸಕರಾದ ಶ್ರೀ ಷಡಕ್ಷರಿಯವರು ಸಹ ಪರಿಹಾರ ಅವೈಜ್ಞಾನಿಕ ಎಂದು ದೂರಿದರು. ಇದಕ್ಕೆ ಮಾನ್ಯ ಶಾಸಕರು ಮತ್ತು ಜಿಲ್ಲಾ ಪಂಚಾಯತ್ ಸದಸ್ಯರುಗಳು ನಿಯೋಗ ಹೋಗಲು ಶ್ರೀಮತಿ ಶಾಂತಲ ರಾಜಣ್ಣನವರು ತಿಳಿಸಿದರು.

MGNREGA :- ಜಿ.ಪಂ.ಮಾನ್ಯ ಸದಸ್ಯರಾದ ಶ್ರೀ ವೈ.ಹೆಚ್.ಹುಚ್ಚಯ್ಯನವರು, MGNREGA ಯೋಜನೆಯ ಅನುಷ್ಠಾನದಲ್ಲಿ ಪ್ರಸ್ತುತ ಜಿಲ್ಲಾ ಪಂಚಾಯಿತಿಯಲ್ಲಿ ಅಧಿಕಾರಿಗಳು ಕೆಲಸ ನಿರ್ವಹಿಸಲು ಸಾಧ್ಯವಾಗುತ್ತಿಲ್ಲ; ಈ ಯೋಜನೆಯಡಿ ಶಿರಾ ತಾಲ್ಲೂಕು ಒಂದರಲ್ಲಿಯೇ ರೂ. 45.00 ಕೋಟಿ ಮತ್ತು ಕುಣಿಗಲ್ ತಾಲ್ಲೂಕಿನಲ್ಲಿ ರೂ.10.00ಕೋಟಿ ಅನುದಾನ ಅವ್ಯವಹಾರವಾಗಿದೆ ಎಂದು ವಿಶೇಷ ಸಾಮಾಜಿಕ ಲೆಕ್ಕ ಪರಿಶೋಧಕರ ಲೆಕ್ಕ ತಪಾಸಣೆ ವರದಿ ಬಂದಿದ್ದು, ಪ್ರಾರಂಭಿಕ ಹಂತದಲ್ಲಿಯೇ ಸಂಬಂಧಪಟ್ಟ ಕಾರ್ಯನಿರ್ವಾಹಕ ಅಧಿಕಾರಿಗಳು, ಪಿ.ಡಿ.ಓ.ಗಳು, ಇಂಜಿನಿಯರ್ ಗಳು ಮತ್ತು ಸಾಮಾಜಿಕ ಲೆಕ್ಕ ಪರಿಶೋಧಕರುಗಳು ನಿಗಾವಹಿಸಿ ಕೆಲಸ ನಿರ್ವಹಿಸಿ ದಾಖಲೆಗಳನ್ನಿಟ್ಟಿದ್ದರೆ ಯೋಜನೆಯನ್ನು ಉತ್ತಮ ರೀತಿಯಲ್ಲಿ ಅಭಿವೃದ್ಧಿಪಡಿಸಬಹುದಾಗಿತ್ತು; ಆದರೆ ಈಗ ತುಮಕೂರು ಜಿಲ್ಲೆಯು ಕೇಂದ್ರ ತಂಡದ ಮತ್ತು ರಾಜ್ಯ ತಂಡಗಳ ದೃಷ್ಟಿಯಲ್ಲಿ ಅಪರಾಧಿ ಸ್ಥಾನದಲ್ಲಿದೆ; ಕೂಲಿಕಾರರು ಕೆಲಸ ಮಾಡಿ ಕೂಲಿ ಹಣ ಸೆಳೆದಿದ್ದಾರೆ; ಆದರೆ ಅವ್ಯವಹಾರವಾಗಿರುವ ಮೊತ್ತವನ್ನು ಕಾರ್ಯನಿರ್ವಾಹಕ ಅಧಿಕಾರಿ ಮತ್ತು ಪಿ.ಡಿ.ಓ.ಗಳಿಂದ ವಸೂಲಾತಿ ಮಾಡಲು ಕ್ರಮವಹಿಸಿರುವುದು ಯಾವ ನ್ಯಾಯ?, ಪ್ರಶ್ನಿಸಿ, ಗ್ರಾಮ ಪಂಚಾಯಿತಿಗಳ ಗ್ರಾಮ ಸಭೆಗಳಲ್ಲಿ ಕ್ರಿಯಾ ಯೋಜನೆಗಳು ಅನುಮೋದನೆಗೊಂಡಿದ್ದು, ಈ ಕೆಲಸಗಳನ್ನು ಮಾತ್ರ ಮಾಡಲಾಗಿದೆ; ಯೋಜನೆಯ ಸ್ಪಷ್ಟ ಮಾರ್ಗಸೂಚಿಗಳನ್ನು ಪಾಲಿಸಿದ್ದರೆ ಯಾವ ಸಮಸ್ಯೆ ಆಗುತ್ತಿರಲಿಲ್ಲ; ಸಾಮಾಜಿಕ ಲೆಕ್ಕ ಪರಿಶೋಧಕರು ತಾಂತ್ರಿಕತೆ ಹೊಂದಿರುವುದಿಲ್ಲ( not a technical staff )ವಾದ್ದರಿಂದ ಈ ಬಗ್ಗೆ ನಿಷ್ಪಕ್ಷಪಾತವಾಗಿ ಒಂದು ಸದನ ಸಮಿತಿಯನ್ನು ರಚನೆ ಮಾಡಿ ತನಿಖೆ ನಡೆಸಿ, ತಪ್ಪಿತಸ್ಥರ ವಿರುದ್ಧ ಕ್ರಮಹಿಸಬೇಕು ಎಂದು ಸಭೆಗೆ ತಿಳಿಸಿದರು. ಜಿ.ಪಂ.ಮಾನ್ಯ ಸದಸ್ಯರಾದ ಶ್ರೀ ಕೆಂಚಮಾರಯ್ಯ ನವರು ಬೆಂಬಲ ವ್ಯಕ್ತಪಡಿಸಿದರು.

ಜಿ.ಪಂ.ಮಾನ್ಯ ಸದಸ್ಯರಾದ ಶ್ರೀ ಸಿ.ಆರ್.ಆಂಜನಪ್ಪನವರು, MGNREGAಅಡಿ ಪಾವಗಡ ತಾಲ್ಲೂಕು ಅತಿ ಹೆಚ್ಚಿನ ಪ್ರಗತಿ ನೀಡಿ ಜಿಲ್ಲೆಗೆ ಪ್ರಶಸ್ತಿ ತಂದಿದೆ; 2009-10ನೇ ಸಾಲಿನಲ್ಲಿ ಕೆಲಸ ನಿರ್ವಹಿಸಲಾಗಿರುವ ಕಾಮಗಾರಿಗಳಿಗೆ ಈ ವರೆಗೆ ಬಿಲ್ ಪಾವತಿಯಾಗಿರುವುದಿಲ್ಲ; ಜಿಲ್ಲಾ / ರಾಜ್ಯ ಮಟ್ಟದಿಂದ ನೋಟೀಸ್ ಬಂದಿದ್ದು, Third party inspectionಗೆ ಸೂಚಿಸಲಾಗಿತ್ತು; ಜಿಲ್ಲಾ ಜಲಾನಯನ ಇಲಾಖೆಯಡಿ ಈ Third party team(NGO)( ಓಂಬಡ್ಸ್ ಮನ್) ಯೋಜನೆಯಡಿ ಕೆಲಸ ಮಾಡಿರುವ ಜಾಗಕ್ಕೆ ಹೋಗದೆ ಬೇರೆ ಕೆಲಸದ ಫೋಟೋ ತೆಗೆದು ಈ ಕೆಲಸಕ್ಕೆ ಹಾಕಿದ್ದು, ಸಂಬಂಧಪಟ್ಟ ಫಲಾನುಭವಿಗಳಿಗೆ ಹಣ ಪಾವತಿಯಾಗಿರುವುದಿಲ್ಲ; ಉದಾಹರಣೆಗೆ ಬೇಗೂರು ಗ್ರಾಮ ಪಂಚಾಯಿತಿ ವ್ಯಾಪ್ತಿಯಲ್ಲಿ ಕಾಲುವೆ ನಿರ್ಮಾಣ ಕೆಲಸ ನಿರ್ವಹಿಸಿದ ಎರಡು ವರ್ಷಗಳ ನಂತರ ಪರಿಶೀಲನಾ ತಂಡ ಭೇಟಿ ನೀಡಿ ಪರಿಶೀಲಿಸಿ ಕೇವಲ ರೂ.1,500/- ಗೆ ಸಂಬಂಧಪಟ್ಟ ಇಂಜಿನಿಯರ್ ರವರನ್ನು ಸೇವೆಯಿಂದ ಅಮಾನತ್ತುಪಡಿಸಿರುತ್ತಾರೆ; ಈ ಹಿನ್ನೆಲೆಯಲ್ಲಿ Third party inspection ಮಾಡಿದ ನಂತರ ಜಿಲ್ಲಾ ಮಟ್ಟದ ಅಧಿಕಾರಿಗಳಿಂದ ಅಡ್ಡತನಿಖೆ(Cross examin) ಮಾಡಿಸಬೇಕಿತ್ತು; ಆದುದರಿಂದ ಇನ್ನೊಮ್ಮೆ ತಂಡ ರಚಿಸಿ ಅಧಿಕಾರಿಗಳ ಜೊತೆ ಕಾಂಗಾರಿಗಳ ಸ್ಥಳಕ್ಕೆ ಭೇಟಿ ನೀಡಿ ಪರಿಶೀಲಿಸಿ ಕ್ರಮಕೈಗೊಳ್ಳುವುದು ಸೂಕ್ತ ಎಂದು ಅಭಿಪ್ರಾಯ ವ್ಯಕ್ತಪಡಿಸಿದರು.

ಡಾ: ರವಿ ನಾಗರಾಜಯ್ಯನವರು, ಯಾವುದೇ ಯೋಜನೆಯಡಿ ರೂ. 1.00 ಕೋಟಿ ಮೇಲ್ಪಟ್ಟ ಮೊತ್ತದ ಕಾಮಗಾರಿಗೆ ಕ್ಯಾಬಿನೆಟ್ ಅನುಮೋದನೆ ನೀಡಬೇಕು, ರೂ.1.00ಲಕ್ಷದ ಮೇಲ್ಪಟ್ಟು ಟೆಂಡರ್ ಬೇಕು; ಆದರೆ ಈ ಯೋಜನೆಯಡಿ ಗ್ರಾಮ ಪಂಚಾಯಿತಿಮಟ್ಟದಲ್ಲೇ ಅನುಷ್ಠಾನ ಮಾಡುವುದರಿಂದ ಆಯಾ ಇಲಾಖೆ ಅಧಿಕಾರಿಗಳು (ಲೈನ್ ಡಿಪಾರ್ಟ್ ಮೆಂಟ್ ಗಳು) ಕೋಟಿ ಹಣ ಮಾಡುತ್ತಿದ್ದು, ಈ ಯೋಜನೆಯನ್ನು ಅನುಷ್ಠಾನಗೊಳಿಸಲು ಕೇಂದ್ರ ಸರ್ಕಾರ ಅನುದಾನ ಮೀಸಲಿಟ್ಟಿದೆ; ಈ ಯೋಜನೆಯನ್ನು ಗ್ರಾಮ ಪಂಚಾಯತಿ ಮಟ್ಟದಲ್ಲಿ ಅನುಷ್ಠಾನಗೊಳಿಸುವ ಆಯ್ಕೆಯೇ ತಪ್ಪು ಎನಿಸುತ್ತದೆ; ಭಾರತದಲ್ಲಿ ಕರ್ನಾಟಕ ಎಲ್ಲಾ ಯೋಜನೆಗಳಿಗೂ ಪ್ರಯೋಗಶಾಲೆ ಮಾಡುತ್ತಿದ್ದಾರೆ; ಇಲ್ಲಿ ಹೆಚ್ಚಿನ ನಿಯಮಗಳನ್ನು ಹಾಕಲಾಗುತ್ತಿದೆ; ಈ ನಿಟ್ಟಿನಲ್ಲಿ ಕೇಂದ್ರಸರ್ಕಾರ ಈ ಅನುಷ್ಠಾನವನ್ನು ಹಿಂಪಡೆಯಬೇಕು; ಕಾಮಗಾರಿ ಅನುಷ್ಠಾನದ ಕುರಿತು ಯಾರಿಗೂ ಜವಾಬ್ದಾರಿಯಿಲ್ಲ; ಹೊಣೆಗಾರಿಕೆ ತಪ್ಪಿಸಿಕೊಳ್ಳಲು ಸಾಮಾಜಿಕ ಲೆಕ್ಕ ತಪಾಸಣೆ ಮಾಡಿಸುವುದು ಸರಿಯಲ್ಲ; ಆದುದರಿಂದ ಈ ಯೋಜನೆಯಡಿ ಗ್ರಾಮ ಪಂಚಾಯಿತಿ ಅನುಷ್ಠಾನವನ್ನು ಹಿಂಪಡೆದು ನೇರವಾಗಿ ಇಲಾಖೆಗಳಿಗೆ ನೀಡಿದಲ್ಲಿ ಅಧಿಕಾರಿಗಳಿಗೆ accountability fix ಆಗುವುದರಿಂದ ಮಾನ್ಯ ಅಧ್ಯಕ್ಷರ ಮಾರ್ಗದರ್ಶನ ಅಥವಾ ಅಧಿಕಾರಿಗಳ ಉಸ್ತುವಾರಿಯಲ್ಲಿ ಈ ಯೋಜನೆಯನ್ನು ಅನುಷ್ಠಾನಗೊಳಿಸಿದರೆ ಗುಣಮಟ್ಟದ ಕೆಲಸಗಳನ್ನು ನಿರೀಕ್ಷಿಸಬಹುದಾಗಿದೆ; ಆದುದರಿಂದ, ಈ ಕುರಿತು ಈ ಸಭೆಯಲ್ಲಿ ಠರಾವು ಮಾಡಿ ಸರ್ಕಾರಕ್ಕೆ ಕಳುಹಿಸಿದರೆ ಒಳ್ಳೆಯದಾಗುತ್ತದೆ, ಇಲ್ಲವಾದಲ್ಲಿ ಜಿಲ್ಲೆಯ ಅಭಿವೃದ್ಧಿ ಕುಂಠಿತವಾಗುತ್ತದೆ ಎಂದು ಅಭಿಪ್ರಾಯ ವ್ಯಕ್ತಪಡಿಸಿದರು. ಈ ಮಾತಿಗೆ ಮಾನ್ಯ ಸದಸ್ಯರಾದ ಶ್ರೀ ಚಂದ್ರಶೇಖರ ಬಾಬುರವರು ಬೆಂಬಲ ವ್ಯಕ್ತಪಡಿಸಿದರು. ಆದರೆ MGNREGA Act ಆದ್ದರಿಂದ ಅದರಂತೆ ಕಾರ್ಯನಿರ್ವಹಿಸಬೇಕಿದೆ ಎಂದು ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಯವರು ತಿಳಿಸಿದರು.

ಜಿ.ಪಂ.ಮಾನ್ಯ ಸದಸ್ಯರಾದ ಶ್ರೀಮತಿ ಲೋಹಿತಾಬಾಯಿಯವರು, ಈ ಎಲ್ಲಾ ಅನಾಹುತಗಳಿಗೆ ಸಂಬಂಧಪಟ್ಟ ಅಧಿಕಾರಿಗಳ ಬೇಜವಾಬ್ದಾರಿಯೇ ಕಾರಣ ಎಂದು ಕಿಡಿಕಾರಿದರು.

ಜಿ.ಪಂ.ಮಾನ್ಯ ಸದಸ್ಯರಾದ ಶ್ರೀ ಸಿ.ಆರ್.ಉಮೇಶ್ ರವರು, ಈ ಯೋಜನೆ ಅನುಷ್ಠಾನ ಬೇಡವೆಂದು ಪ್ರಾರಂಭದಲ್ಲೇ ತಿಳಿಸಿದರೂ ಸಹ ಶಹಭಾಸ್ ಗಿರಿಗಾಗಿ ಮಾಡಿಸಿದ್ದೀರಿ; ಇತ್ತೀಚೆಗೆ ಈ ಯೋಜನೆಯಡಿ ಅವ್ಯವಹಾರದ ಕುರಿತು ದಿನಪತ್ರಿಕೆಗಳಲ್ಲಿ ಪುಂಖಾನುಪುಂಖವಾಗಿ ವರದಿಯಾಗುತ್ತಿದೆ; ಅವೈಜ್ಞಾನಿಕ ವರದಿಯ ಮೇಲೆ ಅಧಿಕಾರಿಗಳ ವಿರುದ್ಧ ಕ್ರಮವಹಿಸಿದರೆ ಯಾರು ಹೊಣೆ? ಈ ಕುರಿತು ಪಂಚಾಯತ್ ರಾಜ್ ಇಂಜಿನಿಯರಿಂಗ್ ಇಲಾಖೆ ವತಿಯಿಂದ ತಪಾಸಣೆ ಮಾಡಿಸಬೇಕು; ಹಿಂದಿನ ಸಾಲಿನಲ್ಲಿ ನಿರ್ವಹಿಸಲಾಗಿರುವ ಕಾಮಗಾರಿಗಳಿಗೆ ಹಣ ಪಾವತಿಸದೆ ಮುಂದಿನ ಸಾಲಿಗೆ ಕ್ರಿಯಾ ಯೋಜನೆ ಮಾಡಲು ಬಿಡುವುದಿಲ್ಲ; ತೋಟಗಾರಿಕೆ ಇಲಾಖೆಯಲ್ಲಿ ಅವ್ಯವಹಾರ ನಡೆದಿಲ್ಲ ಎನ್ನುತ್ತಾರೆ, ಆದರೆ ಅದೇ ಇಲಾಖೆಯಲ್ಲಿ ವಸೂಲಾತಿಗೆ ಸೂಚಿಸಲಾಗಿರುತ್ತದೆ; ಈ ಯೋಜನೆಯಡಿ ನಿರ್ವಹಣೆಗೆ ಅನುದಾನ ನೀಡದೇ ಅಧಿಕಾರಿಗಳನ್ನು ಬಲಿಪಶು ಮಾಡುತ್ತಿದ್ದೀರಿ; ಯೋಜನೆಯಡಿ ಪ್ರಗತಿ ಸಾಧಿಸಿ ಎಂದು ಹೊರೆ ಹೇರುತ್ತಿದ್ದೀರಿ; ಹಾಗೂ ಪ್ರಗತಿ ಮಾಡದಿದ್ದಲ್ಲಿ ಅವರನ್ನು ಸೇವೆಯಿಂದ ಅಮಾನತ್ತು ಮಾಡುತ್ತಿದ್ದೀರಿ; ಕೇರಳ ರಾಜ್ಯದಲ್ಲಿ ಈ ಯೋಜನೆಯ ಅನುಷ್ಠಾನಕ್ಕೆ ಪ್ರತ್ಯೇಕವಾಗಿ ಒಬ್ಬ ಸಹಾಯಕ ಕಾರ್ಯಪಾಲಕ ಇಂಜಿನಿಯರ್ ಮತ್ತು ಇಂಜಿನಿಯರ್ ಇದ್ದಾರೆ; ತಮಿಳುನಾಡಿನಲ್ಲಿ ಟ್ಯಾಂಕರ್ ಗಳಲ್ಲಿ ನೀರು ಸರಬರಾಜು ಮಾಡುವ ಬಾಬ್ತಿಗೂ ವಾರ-ವಾರಕ್ಕೆ ಹಣ ಪಾವತಿ ಮಾಡುತ್ತಿದ್ದಾರೆ; ಇಲ್ಲಿ ಆ ರೀತಿ ವ್ಯವಸ್ಥೆಯಾಗಿ ರುವುದಿಲ್ಲ ಎಂದು ಸಭೆಯ ಗಮನಕ್ಕೆ ತಂದರು. ಇಲ್ಲಿ ಉತ್ತಮ ಆಸ್ತಿ

ಸೃಜಿಸಿದ್ದು,                    E-FMS ಮೂಲಕ ಹಣ ಪಾವತಿಸಲಾಗುತ್ತಿದೆ; ಇಲ್ಲಿ ಅಧಿಕಾರಿಗಳು ಯಾವ ರೀತಿ ಹೊಣೆ ಎಂದು ಪ್ರಶ್ನಿಸಿದರು.

ಜಿ.ಪಂ.ಮಾನ್ಯ ಸದಸ್ಯರಾದ ಶ್ರೀ ಮಣಿಕೆರೆ ನಾಗರಾಜು ರವರು, ಈ ಯೋಜನೆಯಡಿ ಯಾರಿಗೂ ಕೆಲಸ ಬೇಕಿಲ್ಲ; ಯೋಜನೆಯಡಿ ಅಭಿವೃದ್ಧಿ ಆಗಿದೆ; ಆದುದರಿಂದ ಅನುಷ್ಠಾನ ಮೊತ್ತಕ್ಕೆ ಕೆಲಸ ಆಗಿರುವ ಕುರಿತು ಸಮಿತಿ ಮೂಲಕ ತನಿಖೆ ಮಾಡಿಸಿ ಕಾಮಗಾರಿ ಆಗಿರುವುದಕ್ಕೆ ಸಂಬಂಧಪಟ್ಟವರಿಗೆ ಹಣ ಪಾವತಿಸಲು ಕ್ರಮವಹಿಸಬೇಕು ಎಂದು ಸಭೆಗೆ ತಿಳಿಸಿದರು.

ತಿಪಟೂರು ತಾಲ್ಲೂಕಿನ ಮಾನ್ಯ ಶಾಸಕರು, ಯೋಜನೆಯ ಹಣ ದುರುಪಯೋಗವಾಗಬಾರದು, ಯೋಜನೆ ಸಫಲವಾಗಬೇಕು ಎಂಬ ಬಗ್ಗೆ ಮಾನ್ಯ ಸಚಿವರ ಗಮನಕ್ಕೆ ತರಲಾಗಿದೆ; ಹಾಗೂ ಸ್ಥಳ ಪರಿಶೀಲಿಸಿ ಮುಂದಿನ ಅಗತ್ಯ ತೀರ್ಮಾನ ಕೈಗೊಳ್ಳುವಂತೆ ಕೋರಲಾಗಿದೆ; Third party inspection ಬೇಡವೇ ಬೇಡ ಎಂದು ಮಾನ್ಯ ಸಚಿವರ ಗಮನಕ್ಕೆ ತರಲಾಗಿದೆ; ಕೂಲಿಕಾರರಿಗೆ ಎಂಟು ದಿನಗಳಿಗೊಮ್ಮೆ ಕೂಲಿ ಹಣ ಪಾವತಿಸಲೇಬೇಕು, ಇಲ್ಲವಾದಲ್ಲಿ ಅವರ ಜೀವನ ದುಸ್ತರವಾಗುತ್ತದೆ, ಹಾಗೂ ಯೋಜನೆ ಅನುಷ್ಠಾನ ನೀತಿಯನ್ನು ಸರ್ಕಾರದ ಮಟ್ಟದಲ್ಲಿ ಬದಲಾವಣೆ ಮಾಡದಿದ್ದಲ್ಲಿ ಅಧಿಕಾರಿಗಳ್ಯಾರೂ ಕೆಲಸ ಮಾಡಲು ಸಾಧ್ಯವಿಲ್ಲವೆಂದೂ ಸಹ ಮಾನ್ಯ ಸಚಿವರ ಮನವೊಲಿಸಲಾಗಿದೆ; ಅವರು ಜಿಲ್ಲೆಯ ಒಂದೆರಡು ತಾಲ್ಲೂಕುಗಳಿಗೆ ಭೇಟಿ ನೀಡಲು ಒಪ್ಪಿರುತ್ತಾರೆ; ಅದರಂತೆ, ಮುಂದಿನ ಜೂನ್ 7ನೇ ದಿನಾಂಕದ ನಂತರ ಜಿಲ್ಲೆಯ ಮಧುಗಿರಿ ಮತ್ತು ಶಿರಾ ತಾಲ್ಲೂಕುಗಳಿಗೆ ಭೇಟಿ ನೀಡುವವರಿದ್ದಾರೆ; ಅವರು ಜಿಲ್ಲೆಗೆ ಭೇಟಿ ನೀಡಿದ ನಂತರ ವಿಷಯ ತೀರ್ಮಾನವಾಗುತ್ತದೆ ಎಂದು ತಿಳಿಸಿದರು. ಹಾಗೂ ತಾವೂ ಸಹ ವಿಧಾನಸಭೆಯ ಅಂದಾಜು ಸಮಿತಿಯ ಸದಸ್ಯರಾಗಿದ್ದು, ರಾಜ್ಯದಲ್ಲಿನ ಕುಡಿಯುವ ನೀರು, ಶೌಚಾಲಯ, MGNREGA ಯೋಜನೆ ಗಳಲ್ಲಿ ಬಹಳಷ್ಟು ಸಮಸ್ಯೆಗಳನ್ನು ಗಮನಕ್ಕೆ ತಂದಿರುತ್ತೇನೆ; ಈ ಬಗ್ಗೆ ಚರ್ಚಿಸಿ ಇನ್ನೂ ಹೆಚ್ಚಿನ ರೀತಿಯಲ್ಲಿ ಸರ್ಕಾರದಲ್ಲಿ ಚರ್ಚಿಸುವುದಾಗಿ ತಿಳಿಸಿದರು; ಹಾಗೂ ರಾಜ್ಯದ ಎಲ್ಲಾ ಜಿಲ್ಲಾ ಪಂಚಾಯತ್ ಗಳ ಮಾನ್ಯ ಅಧ್ಯಕ್ಷರು ಮತ್ತು ಸ್ಥಾಯಿ ಸಮಿತಿ ಅಧ್ಯಕ್ಷರುಗಳಿಗೆ ಎರಡು ದಿನಗಳ ರಾಜ್ಯಮಟ್ಟದ ಕಾರ್ಯಾಗಾರ ನಡೆಸಬೇಕೆಂದೂ, ಯೋಜನೆಯ ಕುರಿತು ಸರ್ಕಾರದ ಮಟ್ಟದಲ್ಲಿ ಬದಲಾವಣೆ ಮಾಡದಿದ್ದರೆ ಯೋಜನೆಯ ಅನುಷ್ಠಾನ ಸಾಧ್ಯವಾಗುವುದಿಲ್ಲವೆಂದೂ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯ ಮಾನ್ಯ ಸಚಿವರೊಂದಿಗೆ ಸಮಾಲೋಚಿಸುವುದಾಗಿ ಸಹ ಸಭೆಗೆ ತಿಳಿಸಿದರು. ನಂತರ ಕುಡಿಯುವ ನೀರು ಯೋಜನೆಯನ್ನು ಪ್ರತ್ಯೇಕ ಮಾಡಿ, ನಿರ್ವಹಣೆಯನ್ನು ಗ್ರಾಮ ಪಂಚಾಯಿತಿಗೆ ವಹಿಸುವ ಬದಲು ಪಂಚಾಯತ್ ರಾಜ್ ಇಂಜಿನಿಯರಿಂಗ್ ವಿಭಾಗ, ತುಮಕೂರು / ಮಧುಗಿರಿ ಇವರಿಗೆ ನೀಡಿದರೆ ಉತ್ತಮ ಎಂದು ತಿಳಿಸಿದ್ದೇನೆ ಎಂದರು. ಆದುದರಿಂದ ಬೇರೆ ವ್ಯವಸ್ಥೆ ಮಾಡಿ, ಯೋಜನೆಯ ಮಾರ್ಗಸೂಚಿಯ ಪ್ರಕಾರ ನಿರ್ವಹಿಸಿದರೆ ಯಾವುದೇ ಸಮಸ್ಯೆಯಾಗುವುದಿಲ್ಲ ಎಂದು ಸಭೆಗೆ ಮನವರಿಕೆ ಮಾಡಿಸಿದರು.

ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯ ಮಾನ್ಯ ಸಚಿವರು ಜಿಲ್ಲೆಗೆ ಭೇಟಿ ನೀಡಿದ ಸಂದರ್ಭದಲ್ಲಿ ಸಂಬಂಧಪಟ್ಟ ತಾಲ್ಲೂಕುಗಳ ಚುನಾಯಿತ ಪ್ರತಿನಿಧಿ ಗಳು, ತಾಲ್ಲೂಕುಮಟ್ಟದ ಅಧಿಕಾರಿಗಳು, MGNREGA ಯೋಜನೆಯ IAS ಅಧಿಕಾರಿಗಳು ಮತ್ತು ಸಾಮಾಜಿಕ ಲೆಕ್ಕ ತಪಾಸಣೆ ಕಾರ್ಯವನ್ನು ಜಾರಿಗೊಳಿಸಿದವರನ್ನು ಕರೆಸಿ ಸಮಾಲೋಚಿಸಿ ಸಮಸ್ಯೆಯನ್ನು ಇತ್ಯರ್ಥಪಡಿಸಲಾಗುವುದು ಎಂದು ಮಾನ್ಯ ಸಂಸದರು ತಿಳಿಸಿದರು.

ಪಾವಗಡ ತಾಲ್ಲೂಕಿನ ಮಾನ್ಯ ಶಾಸಕರು, ಕಳೆದ ಸಾಲಿನಲ್ಲಿ ಕಾಮಗಾರಿ ನಿರ್ವಹಿಸಿರುವ ಬಾಬ್ತು ಸಂಬಂಧಪಟ್ಟವರಿಗೆ ಮೊದಲು ಹಣ ಕೊಡಿಸಿ ನಂತರ ತನಿಖೆ ಮಾಡಿಸಿ, ಇಲ್ಲವಾದಲ್ಲಿ ವೈಯಕ್ತಿಕ ಫಲಾನುಭವಿಗಳಿಗೆ ತೊಂದರೆಯಾಗುತ್ತದೆ ಎಂದು ಅಭಿಪ್ರಾಯ ವ್ಯಕ್ತಪಡಿಸಿದರು. ಮಾನ್ಯ ಸದಸ್ಯರುಗಳಾದ ಶ್ರೀ ವೈ.ಹೆಚ್.ಹುಚ್ಚಯ್ಯ ಮತ್ತು ಶ್ರೀ ಸಿ.ಆರ್.ಉಮೇಶ್ ರವರುಗಳು ಬೆಂಬಲ ವ್ಯಕ್ತಪಡಿಸಿದರು.

ಜಿ.ಪಂ.ಮಾನ್ಯ ಸದಸ್ಯರಾದ ಶ್ರೀ ರಾಮಚಂದ್ರಯ್ಯನವರು, MGNREGA ಅಡಿ Third party inspection ಮಾಡುವಲ್ಲಿ ಸಂಬಂಧಪಟ್ಟ ಸಂಸ್ಥೆಯವರು ಹಣ ಪಡೆಯುತ್ತಿದ್ದಾರೆ; ಜಿಲ್ಲಾ ಪಂಚಾಯತ್ ಅನುದಾನದಡಿ ವಿವಿಧ ಯೋಜನೆಗಳಿಗೆ ಹಣ ಖರ್ಚಾಗಿಲ್ಲ, ಜಿಲ್ಲಾ ಪಂಚಾಯತ್ ವತಿಯಿಂದ ಯಾವುದೇ ಕೆಲಸಗಳು ಆಗುತ್ತಿಲ್ಲ ಎಂದು ಆಕ್ಷೇಪಿಸಿದರು.

ನಂತರ, ಗ್ರಾಮ ಪಂಚಾಯಿತಿಗಳಿಗೆ Toilet sucking machine(Tanker) ಖರೀದಿಸಲು ಪ್ರತಿ ತಾಲ್ಲೂಕು ಪಂಚಾಯಿತಿಯಿಂದ ತಲಾ ರೂ.13.00 ಲಕ್ಷದಂತೆ ಹಣ ವಸೂಲು ಮಾಡಿ, ಜಿಲ್ಲಾ ಪಂಚಾಯಿತಿ ಹಂತದಲ್ಲಿ ರೂ. 10.50 ಲಕ್ಷ ವೆಚ್ಚದಲ್ಲಿ ಮೇಲ್ಕಂಡ ಯಂತ್ರವನ್ನು ಖರೀದಿಸಿರುತ್ತಾರೆ; ಆದರೆ ಸದರಿ ಯಂತ್ರವು ಎಲ್ಲಿಯೂ ಬಳಕೆ ಯಾಗುತ್ತಿಲ್ಲ; ಅಲ್ಲದೆ, ಅದೇ ಯಂತ್ರವು ಕುಣಿಗಲ್ ತಾಲ್ಲೂಕಿನಲ್ಲಿ ರೂ.6.50ಲಕ್ಷಕ್ಕೆ ಮತ್ತು ಹೊರಗಡೆ ರೂ.3.50ಲಕ್ಷದಿಂದ ರೂ.4.00ಲಕ್ಷ ವೆಚ್ಚದಲ್ಲಿ ದೊರಕಲಿದ್ದಾಗ್ಯೂ ಸಹ ಹೆಚ್ಚಿನ ಮೊತ್ತ ನೀಡಿ ಖರೀದಿಸಿರುತ್ತಾರೆ; ಎಂದು ತೀವ್ರ ಆಕ್ಷೇಪ ವ್ಯಕ್ತಪಡಿಸಿದರು.

ಮುಂದುವರೆದು, ಕೊಳವೆಬಾವಿಗಳನ್ನು ಕೊರೆಯುವಲ್ಲಿ ಡ್ರಿಲ್ಲರ್ ಗಳು ಕಡಿಮೆ ಅಡಿಗಳ ಆಳಕ್ಕೆ ಕೊರೆದು ಹೆಚ್ಚು ಅಡಿಗಳ ಆಳ ನಮೂದಿಸಿ ಬಿಲ್ ಡ್ರಾ ಮಾಡುತ್ತಾರೆ ಎಂದೂ ಸಹ ಆಪಾದಿಸಿದರು.

ಪ್ರತಿಯಾಗಿ ಉಪ ಕಾರ್ಯದರ್ಶಿ(ಅಭಿವೃದ್ಧಿ)ರವರು,ಈ ವಿಷಯವು ಈಗಾಗಲೇ ದಿನಾಂಕ 24-02-2014ರ ಸಾಮಾನ್ಯ ಸಭೆಯಲ್ಲಿ ಚರ್ಚೆಯಾಗಿ ನಿರ್ಣಯವಾಗಿರುತ್ತದೆ; ಸದರಿ ಯಂತ್ರ ಖರೀದಿಗೆ ಜಿಲ್ಲಾ ಪಂಚಾಯತ್ ನಲ್ಲಿ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಯವರ ಅಧ್ಯಕ್ಷತೆಯಲ್ಲಿ ಒಂದು ಸಮಿತಿ ಇದ್ದು, ಸದರಿ ಸಮಿತಿಯ ತೀರ್ಮಾನದ ಮೇರೆಗೆ ತಾಲ್ಲೂಕು ಪಂಚಾಯಿತಿಗಳ ಮೂಲಕ ಪ್ರತಿ ಗ್ರಾಮ ಪಂಚಾಯಿತಿಯಿಂದ ರೂ.30,000/-ದಂತೆ ವಂತಿಗೆ ಪಡೆದು ನಿಯಮಾನುಸಾರ ಈ-ಟೆಂಡರ್ ಪ್ರಕ್ರಿಯೆ ನಡೆಸಿ ಸಮಿತಿಯ ಮುಖೇನ ಅಂತಿಮಗೊಳಿಸಿ ಸದರಿ ಯಂತ್ರವನ್ನು ಖರೀದಿಸಲಾಗಿದೆ; ಯಂತ್ರದ ಬೆಲೆ, ಮೂಲ ದರ ರೂ.7,98,000/- + ಮಾರಾಟ ತೆರಿಗೆ ರೂ.14,598/- + ವ್ಯಾಟ್ @ 14.58% ಸೇರಿ ಒಟ್ಟು ರೂ.10,50,000/- ಆಗಿರುತ್ತದೆ; ಕುಣಿಗಲ್ ತಾಲ್ಲೂಕಿನಲ್ಲಿ ಯಾವ capacity ಯಂತ್ರವನ್ನು ಖರೀದಿಸಿದ್ದಾರೆಯೋ ಗೊತ್ತಿಲ್ಲ; ಇದರಲ್ಲಿ ಎರಡು ವಿಧದ ಯಂತ್ರಗಳಿವೆ, (1) Tractor Mounted & (2) Truck Mounted; Tractor Mounted ಯಂತ್ರವು detachable ಆಗಿದ್ದು, ಟ್ರ್ಯಾಕ್ಟರ್ ನ್ನು ಬೇರೆ ಕೆಲಸಗಳಿಗೂ ಬಳಸಿಕೊಳ್ಳಬಹುದು; ಆದರೆ Truck Mounted ಯಂತ್ರವು Un detachable ಆಗಿದ್ದು, ಬೇರೆ ಕೆಲಸಗಳಿಗೆ ಬಳಸಲು ಬರುವುದಿಲ್ಲ; ಸರ್ಕಾರದ ಆದೇಶದಂತೆ sucking machine ಗಳನ್ನು ಖರೀದಿಸಬೇಕಾಗಿದ್ದು; ಜಿಲ್ಲಾ ಪಂಚಾಯತ್ ಸಾಮಾನ್ಯ ಸಭೆಯಲ್ಲಿ ಅಗತ್ಯವಿರುವ ಟ್ರ್ಯಾಕ್ಟರ್ ಗಳನ್ನು ಖರೀದಿಸಲು ನಿರ್ಣಯವಾಗಿದ್ದು, ನಿರ್ವಹಣೆಗೂ ಸಹ ಆದೇಶ ನೀಡಲಾಗಿದೆ; Tractor ಖರೀದಿ ಮಾಡಿಕೊಳ್ಳಲು ಸಹ ಈಗಾಗಲೇ ಆದೇಶ ನೀಡಲಾಗಿದೆ; ಟ್ರ್ಯಾಕ್ಟರ್ ಖರೀದಿ ವಿಳಂಬವಾದರೆ ಬಾಡಿಗೆ ಆಧಾರದಲ್ಲಿ ಟ್ರ್ಯಾಕ್ಟರ್ ಪಡೆದು ಬಳಕೆ ಮಾಡುವಂತೆಯೂ ಆದೇಶದಲ್ಲಿ ತಿಳಿಸಲಾಗಿದೆ; ಗ್ರಾಮ ಪಂಚಾಯಿತಿ ಮತ್ತು ತಾಲ್ಲೂಕು ಪಂಚಾಯಿತಿ ವಂತಿಕೆಯಲ್ಲಿ ರೂ.2.5ಲಕ್ಷ ಹಣ ಉಳಿದಿದ್ದು,ಸದರಿ

ಮೊತ್ತವನ್ನು ಸಂಬಂಧಪಟ್ಟ ಪಂಚಾಯಿತಿಗಳಿಗೆ ಹಿಂದಿರುಗಿಸಲಾಗಿದ್ದು, ಕೂಡಲೇ ಟ್ರ್ಯಾಕ್ಟರ್ ಖರೀದಿಸಲು ತಿಳಿಸಲಾಗಿದೆ; ಇನ್ನು ಮಾನ್ಯ ಸದಸ್ಯರ ಆರೋಪದ ಮೇರೆಗೆ ದರ ವ್ಯತ್ಯಾಸದ ಕುರಿತು ದಾಖಲಾತಿಗಳನ್ನು ಒದಗಿಸಿದಲ್ಲಿ ಪರಿಶೀಲಿಸಲಾಗುವುದು ಎಂದು ತಿಳಿಸಿದರಲ್ಲದೆ, ಕುಣಿಗಲ್ ನಗರಸಭೆಯಲ್ಲಿ ರೂ.6.75ಲಕ್ಷ ಮೊತ್ತಕ್ಕೆ ಖರೀದಿಸಿದ್ದು, ಅದು ಯಾವ capacityಯದೋ ಗೊತ್ತಿಲ್ಲವೆಂದು ತಿಳಿಸಿದರು.

ಜಿ.ಪಂ.ಮಾನ್ಯ ಸದಸ್ಯರಾದ ಶ್ರೀ ಚಂದ್ರಶೇಖರಬಾಬು ರವರು Tractor mounted 3000 lts., capacity ಯಂತ್ರದ ಬೆಲೆ ರೂ. 6.60ಲಕ್ಷ ಇರುವುದಾಗಿ ಸಭೆಗೆ ತಿಳಿಸಿದರು.

ಮಾನ್ಯ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಯವರು, ಈ ಬಗ್ಗೆ ಈಗಾಗಲೇ ಚರ್ಚೆಯಾಗಿದೆ; ಹೈಕೋರ್ಟ್ ಆದೇಶದನ್ವಯ ಎಲ್ಲಾ ಮಲದ ಗುಂಡಿಗಳ ಸ್ವಚ್ಛತೆಯನ್ನು ಮನುಷ್ಯರ ಮೂಲಕ ಮಾಡಬಾರದು ಎಂದು ಎಲ್ಲ ಜಿಲ್ಲೆಗಳಿಗೆ Toilet sucking machineಗಳನ್ನು ಖರೀದಿಸಿದ್ದು, ಸರ್ಕಾರದ ಆದೇಶದಂತೆ ಜಿಲ್ಲಾ ಪಂಚಾಯತ್ ನಲ್ಲಿ ಈ ರೀತಿ ಖರೀದಿ ಮಾಡಲಾಗಿದೆ; ಮ್ಯಾನುಯಲ್ ಟೆಂಡರ್ ಬೇಡ ಎಂದು ಈ-ಟೆಂಡರ್ ಮೂಲಕ ಖರೀದಿಸಿದೆ, ಸರ್ಕಾರದಿಂದ specification ಕೂಡ ಕೊಟ್ಟಿದ್ದಾರೆ; ಈ ಹಿನ್ನೆಲೆಯಲ್ಲಿ ಆಸಕ್ತರು ನಿಬಂಧನೆಗಳಿಗೊಳಪಟ್ಟು ಪ್ರಕ್ರಿಯೆಯಲ್ಲಿ ಭಾಗವಹಿಸಬಹುದಾಗಿತ್ತು; ಬೇರೆಕಡೆ ಖರೀದಿ ಬಗ್ಗೆ ಇಲ್ಲಿ ಚರ್ಚೆ ಬೇಡ, ಈ-ಟೆಂಡರ್ ನಲ್ಲಿ ಎಲ್ಲರೂ ಭಾಗವಹಿಸಬಹುದಿತ್ತು; ಬೆಂಗಳೂರು(ಗ್ರಾ) ಮತ್ತು ಕೋಲಾರ ಜಿಲ್ಲೆಯವರು ಟೆಂಡರ್ ಪ್ರಕ್ರಿಯೆಯಲ್ಲಿ ಭಾಗವಹಿಸಿದ್ದರು; ಭಾಗವಹಿಸಿದ್ದವರನ್ನು ಕರೆಸಿ, ದರ ಸಂಧಾನ ನಡೆಸಿ, ಕರ್ನಾಟಕ ಪಾರದರ್ಶಕತೆ ಅಧಿನಿಯಮದನ್ವಯ ಖರೀದಿಸಿ ತಾಲ್ಲೂಕು ಕೇಂದ್ರಗಳಿಗೆ ಕಳುಹಿಸಲಾಗಿದೆ; ತಾಲ್ಲೂಕು ಪಂಚಾಯಿತಿ ಮತ್ತು ಗ್ರಾಮ ಪಂಚಾಯಿತಿ ವಂತಿಕೆಯನ್ನು ತರಿಸಿ ಜಿಲ್ಲಾ ಪಂಚಾಯಿತಿ ಸಮಿತಿಯಲ್ಲಿ ಖರೀದಿ ಪ್ರಕ್ರಿಯೆ ಮಾತ್ರ ಮಾಡಲಾಗಿದೆ; ಟ್ರ್ಯಾಕ್ಟರ್ ಖರೀದಿಗೆ ಅವಶ್ಯವಿರುವ ಹಣವನ್ನು ತಾಲ್ಲೂಕು ಪಂಚಾಯಿತಿ ವತಿಯಿಂದಲೇ ಭರಿಸಬೇಕಾಗಿರುವುದರಿಂದ, ಟ್ರ್ಯಾಕ್ಟರ್ ಗಳನ್ನು ಬಾಡಿಗೆ ಆಧಾರದಲ್ಲಿ ಪಡೆದು ಬಳಸಿದರೆ ಹೆಚ್ಚಿನ ಆರ್ಥಿಕ ಹೊರೆ ಆಗದೆಂದು ಭಾವಿಸಿ ಈ ರೀತಿ ಮಾಡಲಾಗಿದೆ; 13ನೇ ಹಣಕಾಸು ಅಧಿನಿಯಮದಡಿ ಹಣ ಖರ್ಚುಮಾಡಿರುತ್ತಾರೆ; ಗ್ರಾಮ ನೈರ್ಮಲ್ಯದ ಬಗ್ಗೆ ಈ ಸಭೆಯಲ್ಲಿ ಎಲ್ಲ ಮಾನ್ಯ ಸದಸ್ಯರುಗಳು ಅತ್ಯಂತ ಕಾಳಜಿ ಹೊಂದಿರುವುದರಿಂದ, ಸದರಿ ಹಣದಲ್ಲಿ ಟ್ರ್ಯಾಕ್ಟರ್ ಖರೀದಿಸಲು ಕ್ರಮವಹಿಸಲಾಗುವುದು ಎಂದು ಸಭೆಗೆ ತಿಳಿಸಿದರು;

ನಂತರ, ಕೊಳವೆಬಾವಿಗಳಿಗೆ ಸಂಬಂಧಿಸಿದಂತೆ, ಕಾರ್ಯಪಡೆ ಮತ್ತು ಐ.ಎಂ.ಐ.ಎಸ್., ಅಡಿ ಕೊರೆಯಲಾಗುತ್ತಿದೆ; ಈವರೆಗೆ 2000 ಕೊಳವೆಬಾವಿಗಳನ್ನು ಕೊರೆಸಲಾಗಿದೆ; ನಾನೇ ಸ್ವತ: ಕೆಲವು ಕಡೆ ಪರಿಶೀಲಿಸಿ ಆಳ ನೋಡಿದ್ದೇನೆ; ಸ್ಯಾಂಪಲ್ ಟೆಸ್ಟ್ ಕೂಡ ಆಗಿದೆ; ಎಲ್ಲಿಯೂ ಲೋಪ ಕಂಡುಬಂದಿಲ್ಲ; ಅಧಿಕಾರಿಗಳು ನಿಯಮಾನುಸಾರ ಕೆಲಸ ಮಾಡಿದ್ದು, ಬಿಲ್ ಬರೆದಿರುತ್ತಾರೆ; ಆದುದರಿಂದ ಇಂಜಿನಿಯರ್ ಗಳ ಬಗ್ಗೆ ಮಾನ್ಯ ಸದಸ್ಯರು ಆರೋಪ ಮಾಡುತ್ತಿರುವುದು ಸರಿಯಲ್ಲ; ಅದರಂತೆ ಯಾವುದಾದರೂ ನಿರ್ಧಿಷ್ಟ ಪ್ರಕರಣವನ್ನು ತಿಳಿಸಿದಲ್ಲಿ ಅದನ್ನು ಪರಿಶೀಲಿಸಿ ಅಗತ್ಯ ಕ್ರಮವಹಿಸಲಾಗುವುದು; ಮಾನ್ಯ ಸದಸ್ಯರು ಈ ರೀತಿ ಆರೋಪ ಮಾಡುವುದರಿಂದ ಜನತೆಗೆ ತಪ್ಪು ಸಂದೇಶ ನೀಡಿದಂತಾಗುತ್ತದೆ ಎಂದು ತಿಳಿಸಿ, ಈ ವಿಷಯದ ಕುರಿತು ತಾವು ಸಹ ಸ್ಥಳ ಭೇಟಿ ಮಾಡಿ ಪರೀಕ್ಷಿಸಿದ್ದು, depth and quality ಬಗ್ಗೆ ಅತ್ಯಂತ ಸಂತಸಪಟ್ಟಿರುವುದಾಗಿ ತಿಳಿಸಿದರು; ಹಾಗೂ ನಿರ್ಧಿಷ್ಟ ಪ್ರಕರಣದ ಕುರಿತು ಬಹಿರಂಗವಾಗಿ ಅಲ್ಲದಿದ್ದರೂ ವೈಯಕ್ತಿಕವಾಗಿ ಮಾಹಿತಿ ಒದಗಿಸುವಂತೆ ಮಾನ್ಯ ಸದಸ್ಯರಿಗೆ ತಿಳಿಸುತ್ತಾ, ಅದನ್ನು ಪರಿಶೀಲಿಸಿ ಕ್ರಮವಹಿಸುವುದಾಗಿ ತಿಳಿಸಿದರು.

ಕುಡಿಯುವ ನೀರು :- ಜಿ.ಪಂ.ಮಾನ್ಯ ಸದಸ್ಯರಾದ ಡಾ: ರವಿ ನಾಗರಾಜಯ್ಯನವರು, ಜಿ.ಪಂ. ವತಿಯಿಂದ ವಿವಿಧ ಯೋಜನೆಗಳಡಿ ಕುಡಿಯುವ ನೀರು ಕಾಮಗಾರಿಗಳನ್ನು ಅನುಷ್ಠಾನ ಮಾಡುತ್ತಾರೆ; ಆದರೆ ಕೆ.ಇ.ಬಿ.ಯವರು ತುರ್ತಾಗಿ ವಿದ್ಯುದೀಕರಣ ಮಾಡುವುದಿಲ್ಲ; ಸಾಮಗ್ರಿ ಕೊರತೆಯ ಸಬೂಬು ಹೇಳುತ್ತಾರೆ; ಒಂದು ವರ್ಷದ ಮೇಲ್ಪಟ್ಟ ಕಾಮಗಾರಿಗಳನ್ನು ನಿರ್ವಹಿಸಲು ಅವರಿಂದ ಸಾಧ್ಯವಾಗುತ್ತಿಲ್ಲ; ಉದಾಹರಣೆಗೆ 2013-14ನೇ ಸಾಲಿನಲ್ಲಿ ಕುಣಿಗಲ್ ತಾಲ್ಲೂಕು ಹೊಂಬೇಗೌಡನ ಪಾಳ್ಯ ಗ್ರಾಮದಲ್ಲಿ ಕಿರುನೀರು ಸರಬರಾಜು ಯೋಜನೆಯಡಿ ಒಂದು ಕೊಳವೆಬಾವಿ ಕೊರೆಯಲಾಗಿದ್ದು, ಅದನ್ನು ಬೆಸ್ಕಾಂನವರು ಈ ವರೆಗೆ ವಿದ್ಯುದೀಕರಿಸಿರುವುದಿಲ್ಲ; ಆದುದರಿಂದ, 2013-14ನೇ ಸಾಲಿನಲ್ಲಿ ಕಿರುನೀರು ಸರಬರಾಜು ಮತ್ತು ಕೊಳಾಯಿ ನೀರು ಸರಬರಾಜು ಯೋಜನೆಯಡಿ ಒಟ್ಟು ಎಷ್ಟು ಕೊಳವೆಬಾವಿಗಳನ್ನು ವಿದ್ಯುದೀಕರಿಸಲಾಗಿದೆ ಎಂಬ ಕುರಿತು ಬೆಸ್ಕಾಂ ಅಧಿಕಾರಿಗಳಿಂದ ಸಭೆಗೆ ಮಾಹಿತಿ ಕೊಡಿಸಬೇಕು ಹಾಗೂ ಸದರಿ ಕಾಮಗಾರಿಗಾಗಿ ಈ ವರೆಗೆ ಎಷ್ಟು ಹಣ ನೀಡಲಾಗಿದೆ ಎಂಬ ಬಗ್ಗೆ ಮುಖ್ಯ ಲೆಕ್ಕಾಧಿಕಾರಿಯವರಿಂದ ಮಾಹಿತಿ ಕೊಡಿಸಬೇಕು ಎಂದು ಕೋರಿದರು.

ಮಾನ್ಯ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಯವರು, ಇತ್ತೀಚೆಗೆ ಸರ್ಕಾರದ ಪ್ರಧಾನ ಕಾರ್ಯದರ್ಶಿಯವರು ನಡೆಸಿದ ದೂರ ಸಂವಾದದಲ್ಲಿನ ಸಾರಾಂಶದನ್ವಯ ತುಮಕೂರು ಜಿಲ್ಲೆಯಲ್ಲಿಯೇ ಹೆಚ್ಚಿನ ಪ್ರಕರಣಗಳು ಬಾಕಿ ಇರುತ್ತವೆ; ಈ ಕುರಿತು ಇಂಜಿನಿಯರ್ ಗಳನ್ನು ಕರೆಸಿ ಸರ್ವೇ ಮಾಡಿದ್ದು, ಕಳೆದ ಸಾಲಿನಲ್ಲಿ ಕೊಳಾಯಿ ನೀರು ಸರಬರಾಜು ಯೋಜನೆಯಡಿ 284 ಪ್ರಕರಣಗಳು ಮತ್ತು ಕಿರು ನೀರು ಸರಬರಾಜು ಯೋಜನೆಯಡಿ 156 ಪ್ರಕರಣಗಳು (ಬರ ಪರಿಹಾರ, ಕಾರ್ಯಪಡೆ ಎಲ್ಲ ಸೇರಿ) ವಿದ್ಯುದೀಕರಣಕ್ಕೆ ಬಾಕಿ ಇದ್ದು, ಆರ್.ಆರ್. ನಂಬರ್ ಗಳನ್ನು ನೀಡಿರುತ್ತಾರೆ; ಈ ಕುರಿತು ಎಲ್ಲೆಡೆ ಪ್ರಗತಿ ಪರಿಶೀಲನೆ ಮಾಡಲಾಗಿರುತ್ತದೆ ಎಂದು ತಿಳಿಸಿದರು.

ಹೊಂಬೇಗೌಡನ ಪಾಳ್ಯ ಪ್ರಕರಣವು ನೊಂದಣಿಯಾಗಿಲ್ಲವೆಂದು ಬೆಸ್ಕಾಂ ಅಧಿಕಾರಿಗಳು ಹೇಳಲಾಗಿ, ಮಾನ್ಯ ಸದಸ್ಯರು ಮುಂದುವರೆದು, ಜಿಲ್ಲಾ ಪಂಚಾಯಿತಿಯಿಂದ ದಾಖಲಾಗಿ ಒಂದು ವರ್ಷವಾಗಿರುತ್ತದೆ; ಅದೇ ರೀತಿ ಇನ್ನೂ 20 ಪ್ರಕರಣಗಳಿವೆ; ಡಿಪಾಸಿಟ್ ಪಾವತಿಸಲಾಗಿದ್ದು, ವಿದ್ಯುದೀಕರಿಸಲು ಇನ್ನೂ ಒಂದು ವಾರವಾಗುತ್ತದೆ ಎಂದು ಅಧಿಕಾರಿಗಳು ತಿಳಿಸುತ್ತಾರೆ; ಅಲ್ಲದೆ, 2013-14ನೇ ಸಾಲಿನಲ್ಲಿ ಕೆಲವು ಕೊಳಾಯಿ ನೀರು ಸರಬರಾಜು ಕಾಮಗಾರಿಗಳನ್ನು ಇನ್ನೂ ಸಹ ಅನುಷ್ಠಾನ ಮಾಡಿರುವುದಿಲ್ಲ; ಈ ಯೋಜನೆಯಡಿ 15 ಮೇಲುತೊಟ್ಟಿ ಕಾಮಗಾರಿಗಳನ್ನು ತೆಗೆದುಕೊಂಡಿದ್ದು, ಅವುಗಳನ್ನು ಅನುಷ್ಠಾನ ಮಾಡಿರುವುದಿಲ್ಲ; ಈ ಕುರಿತು ಮಾಹಿತಿ ಪಡೆಯುವ ಸಲುವಾಗಿ ಸಂಬಂಧಪಟ್ಟ ಅಧಿಕಾರಿಗಳಿಗೆ ದೂರವಾಣಿ ಕರೆ ಮಾಡಿದರೆ ಮೊಬೈಲ್ ಫೋನ್ ಗಳು ಸ್ವಿಚ್ ಆಫ್ ಮಾಡಲಾಗಿರುತ್ತವೆ; ಆದುದರಿಂದ ನಾಳೆ ಬೆಳಗ್ಗೆಯೇ ಸಂಬಂಧಪಟ್ಟ ಅಧಿಕಾರಿಗಳು, ಸೂಪರಿಂಟೆಂಡಿಂಗ್ ಇಂಜಿನಿಯರ್ ಮತ್ತು ಸೆಕ್ಷನ್ ಇಂಜಿನಿಯರ್ ಗಳನ್ನು ಕರೆತಂದು ಸ್ಥಳ ಪರಿಶೀಲಿಸಿ, ತಪ್ಪಿದ್ದಲ್ಲಿ ಸಂಬಂಧಪಟ್ಟವರ ವಿರುದ್ಧ ಸ್ಥಳದಲ್ಲೇ ಕ್ರಮವಹಿಸುವಂತೆ ತಿಳಿಸಿದರು. ಪ್ರತಿಯಾಗಿ ಬೆಸ್ಕಾಂ ಅಧಿಕಾರಿಗಳು, ಸ್ಪಷ್ಟ ಮಾಹಿತಿ ಪಡೆದು ಸಮಸ್ಯೆ ಬಗೆಹರಿಸಿ ಕೊಡುವುದಾಗಿ ಭರವಸೆಯಿತ್ತರು. ಮಾನ್ಯ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಯವರು, ಕುಣಿಗಲ್ ತಾಲ್ಲೂಕಿನ ಎಲ್ಲ ಬಾಕಿ ಪ್ರಕರಣಗಳನ್ನು ಮುಂಬರುವ ಜೂನ್ ಮಾಸಾಂತ್ಯದೊಳಗಾಗಿ ಪೂರ್ಣಗೊಳಿಸಿಕೊಡುವಂತೆ ಸಂಬಂಧಪಟ್ಟ ಅಧಿಕಾರಿಗಳಿಗೆ ಸೂಚನೆ ನೀಡಿದರು.

ಜಿ.ಪಂ.ಮಾನ್ಯ ಸದಸ್ಯರಾದ ಶ್ರೀ ಚಂದ್ರಶೇಖರಬಾಬು ರವರು, ಸಾಮಾನ್ಯವಾಗಿ TC ಸುಟ್ಟರೆ ತುರ್ತಾಗಿ ಬದಲಿ ವ್ಯವಸ್ಥೆ ಮಾಡುವುದಿಲ್ಲ; 63 ಕೆ.ವಿ TC ಸುಟ್ಟರೆ ತಕ್ಷಣಕ್ಕೆ 100 ಕೆ.ವಿ TC ಕೊಡುತ್ತೇವೆ ಎನ್ನುತ್ತಾರೆ;

ಚುನಾವಣಾ ಪೂರ್ವದಲ್ಲಿ ಬೆಸ್ಕಾಂ ಕಛೇರಿ ಮುಂದೆ ಧರಣಿ ಮಾಡಲಾಗಿ, ಅಲ್ಪ ಪ್ರಮಾಣದ (ಸಣ್ಣ-ಪುಟ್ಟ) ಸಾಮಗ್ರಿಗಳನ್ನು ನೀಡಿರುತ್ತಾರೆಯೇ ಹೊರತು ಬದಲಿ TC ಅಳವಡಿಸಿರು ವುದಿಲ್ಲ; TC ಅಳವಡಿಸಲು ಗುತ್ತಿಗೆದಾರರು ರೂ. 25,000/- ಹಣ ನೀಡುವಂತೆ ಕೇಳುತ್ತಾರೆ; ಕುಡಿಯುವ ನೀರು ಯೋಜನೆಗೆ ನೀಡುವ TC ಯನ್ನು ಗುತ್ತಿಗೆದಾರರು ಖಾಸಗಿಯವರಿಗೆ ಹಣಕ್ಕೆ ಮಾರಿಕೊಳ್ಳುತ್ತಾರೆ ಎಂದು ಆಪಾದಿಸಿದರು.

ಜಿ.ಪಂ.ಮಾನ್ಯ ಸದಸ್ಯರಾದ ಡಾ: ರವಿ ನಾಗರಾಜಯ್ಯನವರು, ಕುಡಿಯುವ ನೀರಿ ಯೋಜನೆಗೆ ಪ್ರತ್ಯೇಕ TC ಅಳಡಿಸಲಾಗುತ್ತದೆಯೇ? ಕುಡಿಯುವ ನೀರಿಗೆ ಸಾಕಷ್ಟು ಹಣ ನೀಡಲಾಗುತ್ತಿದೆಯಾದರೂ TC ಅಳವಡಿಸಲು ಏಕೆ ವಿಳಂಭ ಧೋರಣೆ ಮಾಡಬೇಕು? ಅದರ ಮೇಲೆ ಕುಡಿಯುವ ನೀರಿನ IPಸೆಟ್ ಗೆ ಎಂದು ನಮೂದಿಸಲಾಗಿರುತ್ತದೆಯೇ ಎಂದು ಪ್ರಶ್ನಿಸಿದಾಗ, ಬೆಸ್ಕಾಂ ಅಧಿಕಾರಿಗಳು, ಕುಡಿಯುವ ನೀರಿಗೆ ಪ್ರತ್ಯೇಕ TC ಇದೆ; ಅದನ್ನು ಹೊರತುಪಡಿಸಿ ಬೇರೆ TCಗಳನ್ನು ಅಳವಡಿಸಲು ಬಿಡುವುದಿಲ್ಲ; ಆದರೆ ವಿಶೇಷ ಫಲಕವನ್ನೇನೂ ಹಾಕಿರುವುದಿಲ್ಲ; ಯಾವುದೇ TCಯನ್ನು ಖಾಸಗಿಯವರ ಕೊಳವೆಬಾವಿಗೆ ಅಳವಡಿಸಿರುವುದಿಲ್ಲ; ಆ ರೀತಿಯ ಯಾವುದಾದರೂ ನಿರ್ದಿಷ್ಟ ಪ್ರಕರಣಗಳನ್ನು ನೀಡಿದಲ್ಲಿ ಪರಿಶೀಲಿಸಲಾಗುವುದು ಎಂದು ಸಭೆಗೆ ತಿಳಿಸಿದರು.

ಜಿ.ಪಂ.ಮಾನ್ಯ ಸದಸ್ಯರಾದ ಶ್ರೀ ಸಿ.ಆರ್.ಉಮೇಶ್ ರವರು, ತಮ್ಮ ಕ್ಷೇತ್ರ ವ್ಯಾಪ್ತಿಯ ಮಾರಪ್ಪಳ್ಳಿಯಲ್ಲಿ ಕಳೆದ ಎರಡು ವರ್ಷಗಳ ಹಿಂದೆಯೇ ಸಾಮಗ್ರಿ ಮತ್ತು ಆರ್.ಆರ್. ನಂಬರ್ ಗಳನ್ನು ಪೂರೈಸಿದ್ದರೂ ಸಹ ಸಂಬಂಧಪಟ್ಟ ಗುತ್ತಿಗೆದಾರರು ಕಾಮಗಾರಿ ಪೂರ್ಣಗೊಳಿಸಿರುವುದಿಲ್ಲ; ಕೆ.ಇ.ಬಿ.ಯಲ್ಲಿ ಹಗಲು ದರೋಡೆ ನಡೆಯುತ್ತಿದೆ ಎಂದು ಆಪಾದಿಸಿದರು. ಪೂರಕವಾಗಿ ಶ್ರೀ ಚಂದ್ರಶೇಖರ ಬಾಬು ರವರು ಬೆಸ್ಕಾಂನ ಸೆಕ್ಷನ್ ಆಫೀಸರ್ ಗಳ ವಿರುದ್ಧ ತೀವ್ರ ಕ್ರಮವಹಿಸದಿದ್ದಲ್ಲಿ ಬಹಳ ತೊಂದರೆ ಯಾಗುತ್ತದೆ ಎಂದು ಸಭೆಯ ಗಮನಕ್ಕೆ ತಂದರು. ಪ್ರತಿಯಾಗಿ ಬೆಸ್ಕಾಂ ಅಧಿಕಾರಿಗಳು, ಪ್ರಸ್ತುತ ಎಲ್ಲ ತಾಲ್ಲೂಕುಗಳಲ್ಲಿ TC ದಾಸ್ತಾನು ಇರುವುದರಿಂದ ರೈತರುಗಳು ತುಮಕೂರಿಗೆ ಬರುವ ಅಗತ್ಯವಿಲ್ಲ ಎಂದು ಸಭೆಗೆ ತಿಳಿಸಿದರು.

ಜಿ.ಪಂ.ಮಾನ್ಯ ಸದಸ್ಯರಾದ ಶ್ರೀ ಸಿ.ಆರ್.ಉಮೇಶ್ ರವರು, ಕುಡಿಯುವ ನೀರಿಗೆ ಬೆಸ್ಕಾಂನವರು ಡಿಪಾಸಿಟ್ ವಸೂಲಿ ಮಾಡುತ್ತಿರುವುದರಿಂದ ಕುಡಿಯುವ ನೀರಿಗೆ ನೀಡಲಾಗುವ TCಗಳಿಗೆ ಬಣ್ಣ ಬದಲಾವಣೆ ಅಥವಾ ಸೀಲ್ ಮಾಡಿಸಿದರೆ ಅನುಕೂಲವಾಗುತ್ತದೆ; ಜಿಲ್ಲೆಯಾದ್ಯಂತ ಅಕ್ರಮ-ಸಕ್ರಮದಡಿ ಈ ವರೆಗೆ ರೂ.16.50ಲಕ್ಷ ಹಣ ಕಟ್ಟಿಸಿಕೊಂಡಿದ್ದು, ಯಾವುದೇ ಪ್ರಕರಣಗಳನ್ನು ಸಕ್ರಮಗೊಳಿಸಿರುವುದಿಲ್ಲ ಎಂದು ಆಪಾದಿಸಿದರು.

ಜಿ.ಪಂ.ಮಾನ್ಯ ಸದಸ್ಯರಾದ ಶ್ರೀ ಚಂದ್ರಶೇಖರಬಾಬು ರವರು, ಕುಡಿಯುವ ನೀರು ಯೋಜನೆಯಡಿ ಕೊಳವೆಬಾವಿಗೆ ರೂ.1.00 ಲಕ್ಷ, ಬೆಸ್ಕಾಂ ಡಿಪಾಸಿಟ್ ರೂ.1.25 ಲಕ್ಷ ಹಾಗೂ ಸಾಮಗ್ರಿಗೆ ರೂ.75,000/- ಹಣ ನೀಡುತ್ತಿದ್ದರೂ ಸಹ ಸಂಬಂಧಪಟ್ಟ ಅಧಿಕಾರಿಗಳು ಕಾಮಗಾರಿಯನ್ನು ಸಮರ್ಪಕವಾಗಿ ಉಸ್ತುವಾರಿ(monitor) ಮಾಡುತ್ತಿಲ್ಲ; ಆದುದರಿಂದ, ಈ ಕುರಿತು ಸಭೆ ನಡೆಸಿ reconcile ಮಾಡಬೇಕು ಎಂದು ಸಲಹೆ ನೀಡಿದರು.

ಮಾನ್ಯ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಯವರು, ಕುಡಿಯುವ ನೀರಿಗಾಗಿ ಅಳವಡಿಸಲಾಗುವ TCಗಳಿಗೆ ವಿಶೇಷ ಗುರುತು ಮಾಡಿ ತುರ್ತಾಗಿ ಅಳವಡಿಸಿ, ಉಸ್ತುವಾರಿ ಬಲಪಡಿಸುವಂತೆ ಬೆಸ್ಕಾಂ ಅಧಿಕಾರಿಗಳಿಗೆ ತಿಳಿಸಿದರು. ಡಾ: ರವಿ ನಾಗರಾಜಯ್ಯನವರು, ತುರ್ತಾಗಿ TCಗಳನ್ನು ಅಳವಡಿಸದಿದ್ದಲ್ಲಿ ಧರಣಿ ಕೂರುವುದಾಗಿ ಸಭೆಯ ಗಮನಕ್ಕೆ ತಂದರು.

ಜಿ.ಪಂ.ಮಾನ್ಯ ಸದಸ್ಯರಾದ ಶ್ರೀ ಮಣಿಕಿಕೆರೆ ನಾಗರಾಜ್ ರವರು, ಎಡೆಯೂರು - ಮಾರ್ಕೋನಹಳ್ಳಿ ಶಾಶ್ವತ ಕುಡಿಯುವ ನೀರು ಯೋಜನೆಯ ಕಾಮಗಾರಿಯು ಪ್ರಾರಂಭಗೊಂಡು ನಾಲ್ಕು ವರ್ಷಗಳು ಕಳೆದರೂ ಈ ವರೆಗೆ ಕಾಮಗಾರಿ ಪೂರ್ಣಗೊಂಡಿರುವುದಿಲ್ಲ; ಸಂಬಂಧಪಟ್ಟ ಅಧಿಕಾರಿಗಳು ಸ್ಥಳ ಭೇಟಿ ನೀಡಿ ಪರಿಶೀಲನೆ ಮಾಡಿರುವುದಿಲ್ಲ; ಆದುದರಿಂದ, ರೂ.4.50ಕೋಟಿ ಮೊತ್ತದ ಈ ಕಾಮಗಾರಿಯ ವಿಳಂಬಕ್ಕೆ ಕಾರಣವೇನು? ಎಷ್ಟು ದಿನಗಳಲ್ಲಿ ಈ ಕಾಮಗಾರಿಯನ್ನು ಪೂರ್ಣಗೊಳಿಸಿಕೊಡಲಾಗುವುದು ಎಂಬ ಕುರಿತು ಸಂಬಂಧಪಟ್ಟ ಅಧಿಕಾರಿಗಳಿಂದ ಮಾಹಿತಿ ಕೊಡಿಸಬೇಕು ಎಂದು ಸಭೆಯ ಗಮನಕ್ಕೆ ತಂದರು.

ಸಹಾಯಕ ಕಾರ್ಯಪಾಲಕ ಇಂಜಿನಿಯರ್, ಪಂ.ರಾ.ಇಂ.ಉಪವಿಭಾಗ, ಕುಣಿಗಲ್ ರವರು, ಸದರಿ ಕಾಮಗಾರಿಯು ಅಂತಿಮ ಹಂತದಲ್ಲಿದ್ದು, ಮುಂಬರುವ ಜುಲೈ ಮಾಸಾಂತ್ಯದೊಳಗಾಗಿ ಪೂರ್ಣಗೊಳಿಸಿ ಕೊಡುವುದಾಗಿ ಸಭೆಗೆ ಭರವಸೆಯಿತ್ತರು.

ಡಾ: ರವಿ ನಾಗರಾಜಯ್ಯನವರು, RMSA ಅಡಿ ಬಹುತೇಕ ಕಡೆಗಳಲ್ಲಿ ಪ್ರೌಢಶಾಲಾ ಕೊಠಡಿ ನಿರ್ಮಾಣ ಕಾಮಗಾರಿ ಪ್ರಾರಂಭಿಸಿಲ್ಲ ದಿರುವ ಕುರಿತು ತೀವ್ರ ಆಕ್ಷೇಪ ವ್ಯಕ್ತಪಡಿಸಿದರು. ಮಾನ್ಯ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಯವರು, ಈ ಕುರಿತು ಕಳೆದ ಎರಡು ದಿನಗಳ ಹಿಂದೆ ಸಂಬಂಧಪಟ್ಟ ರಾಜ್ಯಮಟ್ಟದ ಅಧಿಕಾರಿಗಳೊಂದಿಗೆ ಸಮಾಲೋಚಿಸಲಾಗಿದ್ದು, ಅವರು "ಹಣ ಪಾವತಿಯಾಗಿಲ್ಲದಿರುವುದರಿಂದ ತೊಡಕಾಗಿದ್ದು, ಈ ವಾರದಲ್ಲಿ ಎಲ್ಲೆಡೆ ಕಾಮಗಾರಿ ಪ್ರಾರಂಭಿಸುವುದಾಗಿ ತಿಳಿಸಿರುತ್ತಾರೆ; ಒಟ್ಟಾರೆ 156 ಕೊಠಡಿಗಳ ನಿರ್ಮಾಣ ಕಾಮಗಾರಿಯನ್ನು ಪ್ರಾರಂಭಿಸಲು ಸಂಸ್ಥೆಯವರಿಗೆ ತಿಳಿಸಲಾಗಿದೆ; ಹಾಗೂ ಈ ವಾರದಲ್ಲಿ ಪ್ರಾರಂಭ ಮಾಡದಿದ್ದಲ್ಲಿ ಸದರಿ ಸಂಸ್ಥೆಯ ಹೆಸರನ್ನು (M/s Jampana Constructions) ಕಪ್ಪು ಪಟ್ಟಿಗೆ ಸೇರಿಸಲಾಗುವುದು ಎಂದು ತಿಳಿಸಲಾಗಿದೆ " ಎಂದು ತಿಳಿಸಿರುತ್ತಾರೆ ಎಂದು ಸಭೆಗೆ ತಿಳಿಸಿದರು.

( ಕ್ರಮ : ಉಪನಿರ್ದೇಶಕರು, ಸಾರ್ವಜನಿಕ ಶಿಕ್ಷಣ ಇಲಾಖೆ, ತುಮಕೂರು/ಮಧುಗಿರಿ)

ಜಿ.ಪಂ.ಮಾನ್ಯ ಸದಸ್ಯರಾದ ಶ್ರೀಮತಿ ಪ್ರೇಮಾ ಮಹಲಿಂಗಯ್ಯರವರು, ಬಿ.ಸಿ.ಎಂ.ನಿಗಮದಿಂದ ಜಿಲ್ಲೆಯಲ್ಲಿ 2013-14ನೇ ಸಾಲಿನ ವಸತಿ ಯೋಜನೆಯಡಿ ಪ್ರತಿ ತಾಲ್ಲೂಕಿಗೆ ಅಲೆಮಾರಿ ಜನಾಂಗದವರಿಗೆ 40 ಮನೆಗಳು ಮತ್ತು ಅರೆ ಅಲೆಮಾರಿ ಜನಾಂಗದವರಿಗೆ 100 ಮನೆಗಳು ಮಂಜೂರಾಗಿದ್ದು, ಕಾಮಗಾರಿ ಪ್ರಗತಿಯಲ್ಲಿದೆಯೇ? ಎಂದು ಪ್ರಶ್ನಿಸಿದರು. ಯೋಜನಾ ನಿರ್ದೇಶಕರು, ಡಿ.ಆರ್.ಡಿ.ಎ. ಇವರು, ಅಲೆಮಾರಿ ಜನಾಂಗಕ್ಕೆ 2006-07ನೇ ಸಾಲಿನಲ್ಲಿ 37ಮನೆಗಳ ಗುರಿ ನಿಗಧಿಯಾಗಿದ್ದು, ಈ ಪೈಕಿ 33 ಸಾಧನೆಯಾಗಿ, 4 ಮನೆಗಳು ಬಾಕಿ ಇದ್ದು, ಶೇ.89% ಸಾಧನೆಯಾಗಿರುತ್ತದೆ; 2010-11ನೇ ಸಾಲಿನಲ್ಲಿ ಒಟ್ಟಾರೆಯಾಗಿ 79 ಗುರಿ ನಿಗಧಿಯಾಗಿದ್ದು, ಈ ಪೈಕಿ 52 ಸಾಧನೆಯಾಗಿ 27 ಮನೆಗಳು ಬಾಕಿ ಇದ್ದು, ಶೇ. 79% ಸಾಧನೆಯಾಗಿರುತ್ತದೆ; ಪೂರ್ಣಗೊಂಡಿರುವ ಕಾಮಗಾರಿಗಳಿಗೆ ಹಣ ಪಾವತಿಸಲಾಗಿರುತ್ತದೆ ಎಂದು ಸಭೆಗೆ ವಿವರಿಸಿದರು. 2013-14ನೇ ಸಾಲಿನಲ್ಲಿ ಅಲೆಮಾರಿ ಮತ್ತು ಅರೆ ಅಲೆಮಾರಿ ಜನಾಂಗದವರಿಗೆ ಮನೆ ಮಂಜೂರಾತಿಗೆ ಪ್ರಸ್ತಾವನೆ ಸಲ್ಲಿಕೆಯಾಗಿರುವುದಿಲ್ಲ ಎಂದು ತಿಳಿಸಿದರು.

ಜಿ.ಪಂ.ಮಾನ್ಯ ಸದಸ್ಯರಾದ ಡಾ: ರವಿ ನಾಗರಾಜಯ್ಯ ರವರು, ಪ್ರಸ್ತಾವನೆಯು ಮಾನ್ಯ ಜಿಲ್ಲಾಧಿಕಾರಿಯವರ ಅಧ್ಯಕ್ಷತೆಯ ಸಮಿತಿಯಲ್ಲಿ ಅನುಮೋದನೆಗೊಂಡ ನಂತರ ಬಿ.ಸಿ.ಎಂ.ಇಲಾಖೆ ಇವರ ಮುಖೇನ RGRHCL ನಿಗಮಕ್ಕೆ ಹೋಗಬೇಕಾಗುತ್ತದೆ; ಈ ನಿಟ್ಟಿನಲ್ಲಿ ಕಳೆದ ಸಾಲಿನಲ್ಲಿ ಚುನಾವಣೆ

ಪ್ರಯುಕ್ತ 2012-13ನೇ ಸಾಲಿನ 2000ಮನೆಗಳ ಗುರಿ ಇನ್ನೂ ಮಂಜೂರಾಗಿಲ್ಲ ವೆನಿಸುತ್ತದೆ ಎಂದು ಅಭಿಪ್ರಾಯ ವ್ಯಕ್ತಪಡಿಸಿದರು.

ಯೋಜನಾ ನಿರ್ದೇಶಕರು, ಡಿ.ಆರ್.ಡಿ.ಎ ರವರು ಮಾತನಾಡಿ 2011-12ನೇ ಸಾಲಿನಲ್ಲಿ, ಜಿಲ್ಲಾ ಅಧಿಕಾರಿಗಳು, ಹಿಂದುಳಿದ ವರ್ಗಗಳ ಹಾಗೂ ಅಲ್ಪಸಂಖ್ಯಾತರ ಅಭಿವೃದ್ಧಿ ಕಲ್ಯಾಣ ಇಲಾಖೆ ಇವರು ಅಲೆಮಾರಿ ಫಲಾನುಭವಿಗಳ ಪಟ್ಟಿಯನ್ನು ಕಳುಹಿಸಿರುವುದಾಗಿ ಜಿಲ್ಲಾ ಪಂಚಾಯಿತಿಗೆ ಮಾಹಿತಿ ನೀಡಿರುತ್ತಾರೆ ಎಂಬ ಅಂಶವನ್ನು ಸಭೆಯ ಗಮನಕ್ಕೆ ತರಲಾಗಿರುತ್ತದೆ.

ಜಿ.ಪಂ.ಮಾನ್ಯ ಸದಸ್ಯರಾದ ಶ್ರೀ ಆರ್.ಸಿ.ಆಂಜನಪ್ಪ ರವರು, ಪಾವಗಡ ತಾಲ್ಲೂಕು ವೈ.ಎನ್. ಹೊಸಕೋಟೆಯಲ್ಲಿ ನಡೆಯುತ್ತಿರುವ ಸಿದ್ಧಲಿಂಗೇಶ್ವರ ಉಣ್ಣೆ ಕೈಮಗ್ಗ ನೇಕಾರರ ಸಹಕಾರ ಸಂಘಕ್ಕೆ ಸಂಬಂಧಿಸಿದಂತೆ, ಗ್ರಾಮ ಪಂಚಾಯಿತಿ ಕಾರ್ಯದರ್ಶಿ ಮತ್ತು ಸ್ಥಳೀಯರ ಕುತಂತ್ರದಿಂದ ಆಯ್ಕೆ ಪಟ್ಟಿಯಲ್ಲಿ ನಮೂದಾಗಿರುವ ಹೆಸರೇ ಬೇರೆ ಮತ್ತು ಮನೆ ಕಟ್ಟಿಕೊಂಡಿರುವ ಫಲಾನುಭವಿಯ ಹೆಸರೇ ಬೇರೆಯಾಗಿದೆ ಎಂದು ತಿಳಿಸಿ, ಈ ಬಗ್ಗೆ ಪರಿಶೀಲಿಸಿ ಸಂಬಂಧಪಟ್ಟವರ ವಿರುದ್ಧ ಕ್ರಿಮಿನಲ್ ಕೇಸ್ ದಾಖಲಿಸಬೇಕು ಎಂದು ಸಭೆಗೆ ತಿಳಿಸಿದರು. ನಂತರ, ಗ್ರಾಮ ಪಂಚಾಯಿತಿಗಳ ಮೂಲಕ ಮನೆಗಳು ಫೀಡ್ ಆಗಿದ್ದು, ಫಲಾನುಭವಿಗಳು ಬಿಲ್ ಹಣ ಪಡೆದಿರುತ್ತಾರೆ; ಆದುದರಿಂದ ಎಲ್ಲಾ ಮನೆಗಳನ್ನು ಒಮ್ಮೆಗೇ ಸ್ಥಗಿತಗೊಳಿಸಿದರೆ ತೊಂದರೆಯಾಗುವುದರಿಂದ, ದೂರುಗಳು ಬಂದಿರುವ ಮನೆಗಳನ್ನು ಮಾತ್ರ ಸ್ಥಗಿತಗೊಳಿಸುವುದು ಒಳಿತು ಎಂದು ತಿಳಿಸಿದರಲ್ಲದೆ, ಜಿಲ್ಲಾ ಪಂಚಾಯತ್ ಡಿ.ಆರ್.ಡಿ.ಎ.ಶಾಖೆಯಿಂದ ಪ್ರತಿಯೊಂದಕ್ಕೂ ಆಕ್ಷೇಪಗಳನ್ನು ಹಾಕದೆ ಯೋಜನೆಯನ್ನು ಪ್ರಗತಿ ಯತ್ತ ಕೊಂಡೊಯ್ಯಬೇಕು ಎಂದು ಸಭೆಗೆ ತಿಳಿಸಿದರು.

ಯೋಜನಾ ನಿರ್ದೇಶಕರು, ಡಿ.ಆರ್.ಡಿ.ಎ., ಜಿಲ್ಲಾ ಪಂಚಾಯತ್, ತುಮಕೂರು ರವರು ಈ ದೂರಿನ ಸಂಬಂಧ ತಾಲ್ಲೂಕು ಮಟ್ಟದಲ್ಲಿ ಮೂರು ಜನ ಅಧಿಕಾರಿಗಳ ತಂಡವನ್ನು ರಚಿಸಿ, ಮನೆಗಳ ಮಂಜೂರಾತಿ ಸಂಬಂಧ ವಿಚಾರಣೆ ನಡೆಸಲು ತಿಳಿಸಿರುತ್ತಾರೆ. ಆದರಂತೆ, ತಂಡ ರಚಿಸಲಾಗಿದ್ದು ವರದಿ ನೀಡಿರುತ್ತಾರೆ. ಸದರಿ ವರದಿಯಂತೆ ಗುಜ್ಜನಡು ಗ್ರಾಮ ಪಂಚಾಯಿತಿ ವ್ಯಾಪ್ತಿಯಲ್ಲಿ ಇಂದಿರಾ ಆವಾಜ್ ಯೋಜನೆಯಲ್ಲಿ ಮುದ್ದರಂಗಮ್ಮ ಕೋಂ ಹನುಮಂತರಯಪ್ಪ, ಚಿಕ್ಕಹಳ್ಳಿ ಗ್ರಾಮ ಪಂಚಾಯಿತಿ ವ್ಯಾಪ್ತಿಯಲ್ಲಿ ಬಸವ ವಸತಿ ಯೋಜನೆಯಲ್ಲಿ ಹನುಮಕ್ಕ ಬಿನ್ ಶ್ರೀ ರಾಮಪ್ಪ, ಕೆ.ರಾಂಪುರ, ಸಾಯಿಶ್ರೀ ಕೋಂ ಸಂಪತ್ ಕುಮಾರ್, ಭೀಮನಕುಂಟೆ, ವೆಂಕಟಲಕ್ಷ್ಮಮ್ಮ ಕೋಂ ಓಬಳಲೇಶಪ್ಪ, ಭೀಮನಕುಂಟೆ, ಅನುಸೂಯಮ್ಮಕೋಂ ಹನುಮಂತರಾಯಪ್ಪ, ದೊಡ್ಡಹಳ್ಳಿ. ಇದೇ ರೀತಿ, ಇಂದಿರಾ ಆವಾಜ್ ಯೋಜನೆಯಲ್ಲಿ ಹನುಮಕ್ಕ ಕೋಂ ಹುನ್ನೂರಪ್ಪ, ಭೀಮನಕುಂಟೆ, ಸುಶೀಲಮ್ಮ ಕೋಂ ಬಿ.ಜಿ.ಗಂಗಾಧರ, ತಿಮ್ಮಮ್ಮನಹಳ್ಳಿ, ಹನುಮಕ್ಕ ಕೋಂ ತಿಮ್ಮಪ್ಪ, ತಿಮ್ಮಮ್ಮನಹಳ್ಳಿ, ಅನ್ನಪೂರ್ಣ ಕೋಂ ಶ್ರೀನಿವಾಸ, ಭೀಮನಕುಂಟೆ, ಶೋಭಾ ಕೋಂ ರಮೇಶ, ಬೀಮನಕುಂಟೆ ಇವರು ಅನರ್ಹರು ಎಂದು ವರದಿಯಲ್ಲಿ ತಿಳಿಸಲಾಗಿದೆ. ರಾಜವಂತೆ ಗ್ರಾಮ ಪಂಚಾಯಿತಿ ವ್ಯಾಪ್ತಿಯಲ್ಲಿ ಫಲಾನುಭವಿಗಳಿಗೆ ಸಂಬಂಧಿಸಿದಂತೆ ರಾಮಾಂಜನಮ್ಮ ಕೋಂ ಆಂಜಿನಮ್ಮಇವರಿಗೆ ಇಂದಿರಾ ಆವಾಜ್ ಯೋಜನೆಯಲ್ಲಿ 2011-12ನೇ ಸಾಲಿನಲ್ಲಿ ಮನೆ ಮಂಜೂರಾಗಿದ್ದು ಮತ್ತೆ 2013-14ನೇ ಸಾಲಿನಲ್ಲಿ ಮನೆ ಮಂಜೂರಾಗಿದೆ, ರಾಮಾಂಜನಮ್ಮ ಕೋಂ ಶ್ರೀರಾಮಪ್ಪ ಿವರಿಗೆ 2010-11ನೇ ಸಾಲಿನಲ್ಲಿ ಮನೆ ಮಂಜೂರಾಗಿದ್ದು, ಮತ್ತೆ 2013-14ನೇ ಸಾಲಿನಲ್ಲಿ ಮನೆ ಮಂಜೂರಾಗಿರುವುದಾಗಿ ಹಾಗೂ ಲಕ್ಷ್ಮಿದೇವಮ್ಮ ಕೋಂ ನಾರಾಯಣಪ್ಪ ಕೆ.ಇ.ಬಿ.ಗುತ್ತಿಗೆದಾರರಾಗಿದ್ದು, ಇವರ ಮಗ ಸರ್ಕಾರಿ ನೌಕರರಾಗಿರುವುದಾಗಿ ತಿಳಿದು

ಬಂದಿರುವುದಾಗಿ ವರದಿಯಲ್ಲಿ ತಿಳಿಸಲಾಗಿದೆ. ಈ ವರದಿಯನ್ನು ರಾಜೀವ್ ಗಾಂಧಿ ಗ್ರಾಮೀಣ ವಸತಿ ನಿಗಮಕ್ಕೆ ಸಲ್ಲಿಸಲಾಗಿದ್ದು, ನಿಗಮದ ನಿರ್ದೇಶನದಂತೆ ಕ್ರಮಕೈಗೊಳ್ಳಲಾಗುವುದೆಂದು, ಸಭೆಗೆ ಮಾಹಿತಿ ನೀಡಲಾಯಿತು. ರಾಜೀವ್ ಗಾಂಧಿ ವಸತಿ ನಿಗಮದಿಂದ ನೇರವಾಗಿ ಹಣವು ಫಲಾನುಭವಿಗಳಿಗೆ ಬಿಡುಗಡೆಯಾಗುವುದರಿಂದ ಹಣ ಬಿಡುಗಡೆಯಲ್ಲಿ ಜಿಲ್ಲಾ ಪಂಚಾಯಿತಿಯ ಪಾತ್ರವಿರುವುದಿಲ್ಲವೆಂದು ಸಭೆಗೆ ವಿವರಿಸಿದರು.

ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಯವರು ಮಾತನಾಡಿ, ದೂರು ಸಲ್ಲಿಕೆಯಾದ ಹಿನ್ನೆಲೆಯಲ್ಲಿ ರಾಜೀವ್ ಗಾಂಧಿ ಗ್ರಾಮೀಣ ವಸತಿ ನಿಗಮವು ನಿರ್ದೇಶಿಸಿದಂತೆ, ತಂಡವನ್ನು ರಚಿಸಿ ವರದಿ ಸಲ್ಲಿಸಲು ಸೂಚಿಸ ಲಾಗಿದೆ. ಕೆಲವು ಪ್ರಕರಣಗಳ ಸಂಬಂಧ ಲೋಕಾಯುಕ್ತಕ್ಕೆ ದೂರು ದಾಖಲಾಗಿರುತ್ತದೆ. ಕಾರ್ಯ ನಿರ್ವಾಹಕ ಅಧಿಕಾರಿ, ಪಾವಗಡ ರವರು ಈ ಸಂಬಂಧ ಲೋಕಾಯುಕ್ತಕ್ಕೆ ಮಾಹಿತಿ ನೀಡಿರುತ್ತಾರೆ.

ಆದುದರಿಂದ, ಈ ಐದು ಗ್ರಾಮ ಪಂಚಾಯಿತಿಗಳ ಫಲಲಾನುಭವಿಗಳಿಗೆ ಹಣ ಬಿಡುಗಡೆಯನ್ನು ನಿಗಮದ ನಿರ್ದೇಶನದಂತೆ ಸ್ಥಗಿತಗೊಳಿಸಲಾಗಿದೆ. ತನಿಖಾ ತಂಡದ ವರದಿಯನ್ನು ನಿಗಮಕ್ಕೆ ಕಳುಹಿಸಿಕೊಡಲಾಗಿದೆ. ನಿಗಮದ ನಿರ್ದೇಶನದಂತೆ ಈ ಸಂಬಂಧ ಕ್ರಮಕೈಗೊಳ್ಳಲಾಗುವುದೆಂದು ಅರ್ಹ ಫಲಾನುಭವಿಗಳಿಗೆ ನಿಗಮದಿಂದ ನೇರವಾಗಿ ಹಣ ಪಾವತಿಸಲಾಗುವುದೆಂದು ಸಭೆಗೆ ತಿಳಿಸಿದರು. ಜಿಲ್ಲಾ ಪಂಚಾಯಿತಿ ಮಾನ್ಯ ಸದಸ್ಯರಾದ ಶ್ರೀ ಆಂಜನಪ್ಪ ನವರು ಮಾತನಾಡಿ, ರಾಜವಂತಿ ಗ್ರಾಮ ಪಂಚಾಯಿತಿ ವ್ಯಾಪ್ತಿಯ ರಾಮಾಂಜಿನಮ್ಮ ಕೋಂ ಅಂಜನಪ್ಪ ಮತ್ತು ರಾಮಾಂಜಿನಮ್ಮ ಕೋಂ ಶ್ರೀ ರಾಮಪ್ಪ ಇವರುಗಳಿಗೆ ಈ ಹಿಂದೆ ಮನೆ ಮಂಜೂರಾಗಿದ್ದರೂ ಸಹ ಸದರಿ ಫಲಾನುಭವಿಗಳು ಮನೆ ನಿರ್ಮಾಣ ಮಾಡಿರುವುದಿಲ್ಲ ಮತ್ತು ಹಣ ಪಡೆದಿರುವುದಿಲ್ಲ. ಈ ಕಾರಣದಿಂದ 2013—14ನೇ ಸಾಲಿನಲ್ಲಿ ಮನೆ ಮಂಜೂರು ಮಾಡಲಾಗಿದ್ದು, ಇವರು ಅತ್ಯಂತ ಅರ್ಹರಿದ್ದು ಇವರನ್ನು ಅರ್ಹ ಫಲಾನುಭವಿಗಳೆಂದು ಪರಿಗಣಿಸಬೇಕಾಗಿದೆಯೆಂದು ತಿಳಿಸಿದರು. ಈ ಸಂಬಂಧ, ತನಿಖಾ ವರದಿಯನ್ನು ನಿಗಮಕ್ಕೆ ನೀಡಿರುವ ಕಾರಣ ನಿಗಮದ ನಿರ್ದೇಶನದಂತೆ ಕ್ರಮ ವಹಿಸಲಾಗುವುದೆಂದು ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಯವರು ಸಭೆಗೆ ತಿಳಿಸಿದರು.

ಈ ಮೇರೆಗೆ ಶೂನ್ಯ ವೇಳೆಯ ಚರ್ಚೆಯು ಪೂರ್ಣಗೊಂಡು, ಸಭೆಯ ಮಾನ್ಯ ಅಧ್ಯಕ್ಷರು ವಿಷಯವಹಿ ಚರ್ಚೆಯನ್ನು ಪ್ರಾರಂಭಿಸಿದರು. ಅದರಂತೆ;

ವಿಷಯ ಸಂಖ್ಯೆ. 1 : 2014-15ನೇ ಸಾಲಿನ ಜಿಲ್ಲಾ ಪಂಚಾಯತ್ ವ್ಯಾಪ್ತಿಗೊಳಪಡುವ ಎಲ್ಲಾ ಯೋಜನೆಗಳ ವಾರ್ಷಿಕ ಕ್ರಿಯಾ ಯೋಜನೆಗಳನ್ನು ಅನುಮೋದಿಸುವ ಬಗ್ಗೆ:-

ಮುಖ್ಯ ಯೋಜನಾಧಿಕಾರಿಯವರು, ಮಾತನಾಡಿ 2014-15ನೇ ಸಾಲಿಗೆ ಜಿಲ್ಲಾ ವಲಯ ಯೋಜನೆ ಮತ್ತು ಯೋಜನೇತರ ಕಾರ್ಯಕ್ರಮಗಳಡಿ ತುಮಕೂರು ಜಿಲ್ಲೆಗೆ ಒಟ್ಟಾರೆಯಾಗಿ ನಿಗಧಿಯಾಗಿರುವ ಅನುದಾನದ ವಿವರಗಳನ್ನು ಈ ಕೆಳಗಿನಂತೆ ಸಭೆಗೆ ವಿವರಿಸಿದರು.

(ರೂ. ಲಕ್ಷಗಳಲ್ಲಿ)

| ಕ್ರ ಸಂ | ಕಾರ್ಯಕ್ರಮಗಳು | ಯೋಜನೆ | ಯೋಜನೇತರ | ಒಟ್ಟು ನಿಗಧಿ |
|---|---|---|---|---|
| 1 | ಜಿ.ಪಂ.ಕಾರ್ಯಕ್ರಮಗಳು | 15158.14 | 23750.22 | 38908.36 |
| 2 | ತಾ.ಪಂ.ಕಾರ್ಯಕ್ರಮಗಳು | 16420.59 | 55445.26 | 71865.85 |
| 3 | ಗ್ರಾ.ಪಂ.ಕಾರ್ಯಕ್ರಮಗಳು | 03622.09 | 00000.00 | 03622.09 |
| ಒಟ್ಟು | | 35200.82 | 79195.48 | 114396.30 |

ಮುಂದುವರೆದು, ಪ್ರಸಕ್ತ ಸಾಲಿನಲ್ಲಿ ಹಿಂದಿನ ವರ್ಷಕ್ಕಿಂತ ಯೋಜನೆಯಡಿ ರೂ.7,994.00 ಲಕ್ಷಗಳು ಹಾಗೂ ಯೋಜನೇತರದಡಿ ರೂ.11,346.00 ಲಕ್ಷಗಳು ಒಟ್ಟು ರೂ.19,340.00 ಲಕ್ಷಗಳು ಹೆಚ್ಚಿಗೆ ನಿಗಧಿಯಾಗಿರುವುದಾಗಿ ವಿವರಿಸಿದರು.

2014-15ನೇ ಸಾಲಿಗೆ ಯೋಜನೆಯಡಿ ಜಿಲ್ಲಾ ಪಂಚಾಯತ್ ಕಾರ್ಯಕ್ರಮಗಳಿಗಾಗಿ ನಿಗಧಿಪಡಿಸಿರುವ ಒಟ್ಟು ಮೊತ್ತ ರೂ.15,158.14 ಲಕ್ಷ ಹಾಗೂ ಯೋಜನೇತರದಡಿ ರೂ.23,750.22 ಲಕ್ಷಗಳಲ್ಲಿ ವಿವಿಧ ಇಲಾಖೆಗಳ ಕಾರ್ಯಕ್ರಮಗಳಿಗೆ ನಿಗಧಿಪಡಿಸಿರುವ ಮೊತ್ತಕ್ಕೆ ಅನುಗುಣವಾಗಿ ಮಾರ್ಗಸೂಚಿ ಪ್ರಕಾರ ಇಲಾಖಾ ಅಧಿಕಾರಿಗಳು ಸಲ್ಲಿಸಿರುವ ಕ್ರಿಯಾಯೋಜನೆಗಳನ್ನು ಜಿಲ್ಲಾ ಪಂಚಾಯತ್ ಸಾಮಾನ್ಯ ಸಭೆಯ ಅನುಮೋದನೆಗಾಗಿ ಮಂಡಿಸಲಾಗಿದ್ದು, ಸಭೆಯ ಅನುಮೋದನೆ ಕೋರಿದರು.

ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಯವರು ಮಾತನಾಡಿ, ದಿನಾಂಕ 14-05-2014ರಂದು ನಡೆದ ಪೂರ್ವಭಾವಿ ಸಭೆಯಲ್ಲಿ 3054, 2702, 13ನೇ ಹಣಕಾಸು ಯೋಜನೆಗಳ(ರಸ್ತೆ) ಇತ್ಯಾದಿ ಕ್ರಿಯಾ ಯೋಜನೆಗಳನ್ನು ಕೂಡಲೇ ಸಲ್ಲಿಸುವಂತೆ ಸಂಬಂಧಿಸಿದ ಅಧಿಕಾರಿಗಳಿಗೆ ತಿಳಿಸಲಾಗಿತ್ತು. ಆದರೆ ಈವರೆವಿಗೂ ಕ್ರಿಯಾಯೋಜನೆಗಳನ್ನು ಸಲ್ಲಿಸಿರುವುದಿಲ್ಲ ಎಂದರು.

ಮಾನ್ಯ ಜಿ.ಪಂ. ಸದಸ್ಯರಾದ ಡಾ:ರವಿ ನಾಗರಾಜಯ್ಯರವರು ಮಾತನಾಡಿ, 2014-15ನೇ ಸಾಲಿನ ಜಿಲ್ಲಾ ಪಂಚಾಯತ್ ಅಭಿವೃದ್ಧಿ ಅನುದಾನದಡಿ ರೂ.200.00 ಲಕ್ಷಗಳು, ಸಿ.ಎಂ.ಜಿ.ಎಸ್.ವೈ-3054 ರಡಿ ರು.613.22 ಲಕ್ಷಗಳು,13ನೇ ಹಣಕಾಸು(ರಸ್ತೆಗಳು) ಕಾರ್ಯಕ್ರಮದಡಿ ರೂ.907.51 ಲಕ್ಷಗಳು,ಸಣ್ಣ ನೀರಾವರಿ ಕೆರೆಗಳು-2702 ರಡಿ ರೂ.116.16 ಲಕ್ಷಗಳು, ನಿರ್ವಹಣೆ ಮತ್ತು ದುರಸ್ಥಿ-2059 ರಡಿ ರೂ.57.07 ಲಕ್ಷಗಳಿಗೆ ಪಂಚಾಯತ್ ರಾಜ್ ಇಂಜಿನಿಯರಿಂಗ್ ವಿಭಾಗ/ಉಪವಿಭಾಗವಾರು ಅನುದಾನ ಹಂಚಿಕೆ ಮಾಡಿ ತಾಲ್ಲೂಕು ಮಟ್ಟದ ಸಭೆಗಳಲ್ಲಿ ವಿವಿಧ ಕ್ರಿಯಾ ಯೋಜನೆ ಕುರಿತು ಚರ್ಚಿಸಿರುವುದರಿಂದ ಬಹುತೇಕ ಕ್ರಿಯಾ ಯೋಜನೆಗಳು ಅಂತಿಮಗೊಂಡಿರುತ್ತವೆ. ಆದುದರಿಂದ ಸದರಿ ಕ್ರಿಯಾ ಯೋಜನೆಗಳಿಗೆ ಅನುಮೋದನೆ ನೀಡುವ ಅಧಿಕಾರವನ್ನು ಮಾನ್ಯ ಜಿಲ್ಲಾ ಪಂಚಾಯತ್ ಅಧ್ಯಕ್ಷರಿಗೆ ನೀಡಬಹುದಾಗಿದೆ ಎಂದರು. ಇದನ್ನು ಬಹುತೇಕ ಸದಸ್ಯರು ಬೆಂಬಲಿಸಿದರು. ನಂತರ ಪ್ರಸ್ತಾಪಿತ ಹಾಗೂ ಬಾಕಿ ಕ್ರಿಯಾ ಯೋಜನೆಗಳನ್ನು ಅನುಮೋದಿಸುವ ಅಧಿಕಾರವನ್ನು ಮಾನ್ಯ ಜಿಲ್ಲಾ ಪಂಚಾಯತ್ ಅಧ್ಯಕ್ಷರಿಗೆ ನೀಡಲು ಸಭೆಯಲ್ಲಿ ಸರ್ವಾನುಮತದಿಂದ ನಿರ್ಣಯಿಸಲಾಯಿತು.

(ಕ್ರಮ : CPO, ZPT/EEs, PRED, Tumkur/Madhugiri)

ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು ಮಾತನಾಡಿ, 2014-15ನೇ ಸಾಲಿನ ತಾಲ್ಲೂಕು ಪಂಚಾಯತ್ ಕಾರ್ಯಕ್ರಮಗಳಿಗೆ ನಿಗಧಿಯಾಗಿರುವ ಅನುದಾನದ ವಿವರಗಳನ್ನು ಈಗಾಗಲೇ ಎಲ್ಲಾ ತಾಲ್ಲೂಕು ಪಂಚಾಯತ್ ಕಾರ್ಯನಿರ್ವಾಹಕ ಅಧಿಕಾರಿಗಳಿಗೆ ಕಳುಹಿಸಿಕೊಡಲಾಗಿದ್ದು, ಕ್ರಿಯಾ ಯೋಜನೆಗಳನ್ನು ನಿಯಮಾನುಸಾರ ಒಂದು ವಾರದೊಳಗೆ ಸಲ್ಲಿಸುವಂತೆ ಎಲ್ಲಾ ತಾಲ್ಲೂಕು ಪಂಚಾಯತ್ ಕಾರ್ಯನಿರ್ವಾಹಕ ಅಧಿಕಾರಿಗಳಿಗೆ ಸೂಚನೆಗಳನ್ನು ನೀಡಿದ್ದಾಗ್ಯೂ ಯಾವುದೇ ತಾಲ್ಲೂಕು ಪಂಚಾಯಿತಿಯಿಂದ ಕ್ರಿಯಾ ಯೋಜನೆಗಳು ಸ್ವೀಕೃತವಾಗಿರುವುದಿಲ್ಲ. ಈ ಬಗ್ಗೆ ಕಾರ್ಯನಿರ್ವಾಹಕ ಅಧಿಕಾರಿಗಳು ವಿವರಣೆ ನೀಡಬೇಕು ಎಂದರು. ಕುಣಿಗಲ್, ಗುಬ್ಬಿ, ಚಿಕ್ಕನಾಯಕನಹಳ್ಳಿ ಹಾಗೂ ಪಾವಗಡ ತಾಲ್ಲೂಕು ಪಂಚಾಯತ್ ಕಾರ್ಯನಿರ್ವಾಹಕ ಅಧಿಕಾರಿಗಳು 30-05-2014ರಂದು ತಾಲ್ಲೂಕು ಪಂಚಾಯತ್ ಸಾಮಾನ್ಯ ಸಭೆ ಕರೆಯಲಾಗಿದ್ದು, ಸದರಿ ಸಭೆಯಲ್ಲಿ ಮಂಡಿಸಿ ಅನುಮೋದನೆ ಪಡೆದು ಸಲ್ಲಿಸುವುದಾಗಿ ತಿಳಿಸಿದರು. ಮಧುಗಿರಿ, ತುಮಕೂರು, ಕೊರಟಗೆರೆ, ತುರುವೇಕೆರೆ, ಶಿರಾ ಮತ್ತು ತಿಪಟೂರು ತಾಲ್ಲೂಕು ಪಂಚಾಯತ್ ಕಾರ್ಯನಿರ್ವಾಹಕ ಅಧಿಕಾರಿಗಳು ಒಂದು ವಾರದೊಳಗೆ ತಾ.ಪಂ.ಸಾಮಾನ್ಯ ಸಭೆ ಕರೆದು ಕ್ರಿಯಾ ಯೋಜನೆಗಳಿಗೆ ಅನುಮೋದನೆ ಪಡೆದು ಸಲ್ಲಿಸುವುದಾಗಿ ಸಭೆಗೆ

ವಿವರಿಸಿದರು. ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು ಯಾವುದೇ ಕಾರಣಕ್ಕೆ ವಿಳಂಬ ಮಾಡದಂತೆ ಒಂದು ವಾರದೊಳಗೆ ಎಲ್ಲಾ ತಾಲ್ಲೂಕು ಪಂಚಾಯತ್ ಗಳ ಕ್ರಿಯಾ ಯೋಜನೆಗಳನ್ನು ಸಲ್ಲಿಸುವಂತೆ ಸೂಚಿಸಿದರು.

(ಕ್ರಮ : ಎಲ್ಲಾ ತಾಲ್ಲೂಕು ಪಂಚಾಯತ್ ಕಾರ್ಯನಿರ್ವಾಹಕ ಅಧಿಕಾರಿಗಳು)

ಜಿ.ಪಂ.ಮಾನ್ಯ ಸದಸ್ಯರಾದ ಡಾ:ರವಿ ನಾಗರಾಜಯ್ಯನವರು, ಸಹಾಯಕ ಕಾರ್ಯಪಾಲಕ ಇಂಜಿನಿಯರ್, ಪಂ.ರಾ.ಇಂ.ಉಪವಿಭಾಗ, ಕುಣಿಗಲ್ ಕಛೇರಿ ಸರಿಯಾದ ಜಾಗದಲ್ಲಿಲ್ಲ; ಪ್ರಸ್ತುತ ತಾಲ್ಲೂಕು ಪಂಚಾಯಿತಿ ಕಟ್ಟಡದ ಪ್ರಾಂಗಣದಲ್ಲಿ ಬಸ್ ಸ್ಟ್ಯಾಂಡ್ ಪಕ್ಕ ಇದ್ದು, ಸಾರ್ವಜನಿಕರಿಂದ ತುಂಬಿರುತ್ತದೆ, ಕೆಲಸ ಮಾಡಲು ಅಸಾಧ್ಯ ಎಂದರು; ಅಲ್ಲದೆ, ಈಗ ತಾಲ್ಲೂಕು ಪಂಚಾಯಿತಿಯವರು ತಾಲ್ಲೂಕು ಪಂಚಾಯಿತಿ ಅಭಿವೃದ್ಧಿ ಅನುದಾನದಡಿ ವಾಣಿಜ್ಯ ಸಂಕೀರ್ಣವನ್ನು ನಿರ್ಮಿಸಲು ಉದ್ದೇಶಿಸಿರುವುದರಿಂದ ಸದರಿ ಪಂ.ರಾ.ಇಂ.ಉಪವಿಭಾಗ ಕಛೇರಿಯನ್ನು ತೆರವುಗೊಳಿಸಬೇಕಾಗಿರುತ್ತದೆ; ಆದುದರಿಂದ, ಲೆಕ್ಕಶೀರ್ಷಿಕೆ 2515 ಅಥವಾ ಇನ್ನಿತರ ಯಾವುದಾದರೂ ಯೋಜನೆಯಡಿ ಅನುದಾನ ಬಿಡುಗಡೆ ಮಾಡಿ ಸ್ವಂತ ಕಟ್ಟಡ ನಿರ್ಮಾಣ ಮಾಡಿಕೊಡಬೇಕು ಎಂದು ಕೋರಿದರು.

ಚರ್ಚೆಯ ನಂತರ, ಲೆಕ್ಕ ಶೀರ್ಷಿಕೆ 2515ಅಡಿ ಒಟ್ಟಾರೆ ಲಭ್ಯವಿರುವ ಅನುದಾನದಲ್ಲಿ ಸಹಾಯಕ ಕಾರ್ಯಪಾಲಕ ಇಂಜಿನಿಯರ್, ಪಂ.ರಾ.ಇಂ.ಉಪವಿಭಾಗ, ಕುಣಿಗಲ್ ಕಛೇರಿ ಕಟ್ಟಡ ನಿರ್ಮಾಣಕ್ಕಾಗಿ ರೂ.10.00ಲಕ್ಷಗಳನ್ನು ಮೀಸಲಿಡಲು ಸಭೆಯು ಸರ್ವಾನುಮತದಿಂದ ತೀರ್ಮಾನಿಸಿತು.

ಜಿ.ಪಂ.ಮಾನ್ಯ ಸದಸ್ಯರಾದ ಶ್ರೀಮತಿ ಶಾಂತಲ ರಾಜಣ್ಣ ನವರು, ಅಂಗವಿಕಲರ ಮೀಸಲಾತಿ (ಶೇ.3) ಅನುದಾನವು ಕಳೆದ ಮೂರು ವರ್ಷಗಳಿಂದ ಖರ್ಚಾಗಿರುವುದಿಲ್ಲ; ಈ ಮೇರೆಗೆ ಮೂರೂ ವರ್ಷದ ಅನುದಾನವನ್ನು ಸೇರಿಸಿ ತಾಲ್ಲೂಕುವಾರು/ಫಲಾನುಭವಿವಾರು/ಕಾರ್ಯಕ್ರಮ ನಿಗಧಿಪಡಿಸಬೇಕು ಎಂದು ಸಭೆಗೆ ತಿಳಿಸಿದರು.

ಮಾನ್ಯ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಯವರು, ಒಟ್ಟಾರೆ ಅನುದಾನಕ್ಕೆ(Allocation) ಶೇ.3ರಂತೆ ತಾಲ್ಲೂಕುವಾರು ಅನುದಾನ ನಿಗಧಿಪಡಿಸಿ ಮೂರೂ ವರ್ಷದ ಅನುದಾನ ಸೇರಿಸಿ ತಾಲ್ಲೂಕುವಾರು/ಫಲಾನುಭವಿವಾರು/ಕಾರ್ಯಕ್ರಮವಾರು ಕ್ರಿಯಾಯೋಜನೆ ಸಲ್ಲಿಸುವಂತೆ ಉಪ ನಿರ್ದೇಶಕರು, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ತುಮಕೂರು ಇವರಿಗೆ ತಿಳಿಸಿದರು.

ಜಿ.ಪಂ.ಮಾನ್ಯ ಸದಸ್ಯರಾದ ಶ್ರೀ ಸಿ.ಆರ್.ಉಮೇಶ್ ರವರು, ಪ್ರಸಕ್ತ ಸಾಲಿನ ಅನುದಾನಕ್ಕೆ ಆಯಾ ತಾಲ್ಲೂಕಿನಲ್ಲೇ ಕ್ರಿಯಾಯೋಜನೆ ತಯಾರಿಸುತ್ತಾರೆ; ಕಾರ್ಯಪಾಲಕ ಇಂಜಿನಿಯರ್, ಪಂ.ರಾ.ಇಂ. ವಿಭಾಗ, ತುಮಕೂರು/ಮಧುಗಿರಿ ಇವರು ಕಟ್ಟಡಗಳಿಗೆ Ramps ನಿರ್ಮಾಣ ಕಾಮಗಾರಿಗಳನ್ನು ಕೊಡಲು ಕೇಳುತ್ತಾರೆ; ಕೆಲವು ಸದಸ್ಯರು ತ್ರಿಚಕ್ರ ವಾಹನ ನೀಡಲು ಕೇಳುತ್ತಾರೆ, ಕೆಲವರು ಕಿವುಡ ಮೂಕ ಮಕ್ಕಳಿಗೆ ಅಗತ್ಯ ಉಪಕರಣಗಳನ್ನು ನೀಡಲು ಕೇಳುತ್ತಾರೆ; ಆದುದರಿಂದ ಯಾವ ರೀತಿ ಕ್ರಿಯಾ ಯೋಜನೆಯನ್ನು ತಯಾರಿಸಬೇಕು ಎಂದು ಕೇಳಿದರು.

ಮಾನ್ಯ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಯವರು, ಕಟ್ಟಡ ಮತ್ತು Rampsಗಳಿಗೆ ಸಂಬಂಧಪಟ್ಟಂತೆ ಕಾರ್ಯಪಾಲಕ ಇಂಜಿನಿಯರ್, ಪಂ.ರಾ.ಇಂ.ವಿಭಾಗ, ತುಮಕೂರು/ಮಧುಗಿರಿ ಇವರಿಗೆ ಹಾಗೂ ಅಂಗವಿಕಲರಿಗೆ ಅಗತ್ಯ ಉಪಕರಣಗಳ ಕುರಿತು ಉಪ ನಿರ್ದೇಶಕರು, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ತುಮಕೂರು ಇವರಿಗೆ ಕ್ರಿಯಾ ಯೋಜನೆಯನ್ನು ಸಲ್ಲಿಸಬೇಕೆಂದು ತಿಳಿಸಿದರು. ಅಲ್ಲದೆ, ಜಿಲ್ಲಾ ಪಂಚಾಯತ್ ಕಟ್ಟಡದ ಮೇಲಂತಸ್ತಿಗೆ ಹೋಗಲು ಸಹ ಒಂದು ramp ನಿರ್ಮಿಸಲು ಸೂಚಿಸಿದರು.

ಜಿ.ಪಂ.ಮಾನ್ಯ ಸದಸ್ಯರಾದ ಶ್ರೀ ವೈ.ಹೆಚ್.ಹೆಚ್.ಹುಚ್ಚಯ್ಯನವರು, ಜಿಲ್ಲಾ ಪಂಚಾಯತ್ ಅಧೀನ ಕಛೇರಿಗಳ ಅನುಪಯುಕ್ತ ವಾಹನಗಳನ್ನು ವಿಲೇವಾರಿ ಮಾಡಿ ಹೊಸ ವಾಹನಗಳನ್ನು ಒದಗಿಸಿ ಅಧಿಕಾರಿಗಳ ದೈನಂದಿನ ಕಛೇರಿ ಕೆಲಸಗಳಿಗೆ ಅನುವು ಮಾಡಿಕೊಡಬೇಕೆಂದು ಕೋರಿದರು. ಪ್ರತಿಯಾಗಿ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಯವರು, ಹೊಸ ವಾಹನಗಳನ್ನು ಖರೀದಿಸಲು ಸರ್ಕಾರವು ಅನುಮತಿ ನೀಡಿಲ್ಲದ ಕಾರಣ, ಅಧಿಕಾರಿಗೆ ವಾಹನ ನಿಗಧಿಯಾಗಿದ್ದು ವಾಹನ ಇಲ್ಲದಿದ್ದಲ್ಲಿ ಮಾಹೆಯಾನ ರೂ.25,000/- ಬಾಡಿಗೆ ಆಧಾರದಲ್ಲಿ ಹೊರಗುತ್ತಿಗೆಯಿಂದ ಬಾಡಿಗೆಗೆ ವಾಹನ ವ್ಯವಸ್ಥೆ ಮಾಡಿಕೊಳ್ಳಬಹುದಾಗಿರುತ್ತದೆ; ಅದರಂತೆ, ನಿಗಧಿತ ಅರ್ಜಿ ನಮೂನೆಯನ್ನು ಭರ್ತಿ ಮಾಡಿ ಜಿಲ್ಲಾ ಪಂಚಾಯತ್ ಗೆ ಸಲ್ಲಿಸಿದಲ್ಲಿ ನಿಯಮಾನುಸಾರ ಪರಿಶೀಲಿಸಿ ಅನುಮತಿ ನೀಡಲಾಗುವುದು ಎಂದು ತಿಳಿಸಿದರು.

ಜಿ.ಪಂ.ಮಾನ್ಯ ಸದಸ್ಯರಾದ ಶ್ರೀ ಸಿ.ಆರ್.ಉಮೇಶ್ ರವರು, ಕಳೆದ ಸಾಲಿನ ಮುಂದುವರಿದ ಕಾಮಗಾರಿಗಳ ಸಂಬಂಧ ಅನುದಾನ ಲಭ್ಯವಿಲ್ಲದ ಕಾರಣ, ಕಾಮಗಾರಿ ಪೂರ್ಣಗೊಳಿಸಿ ಬಿಲ್ ನೀಡಿದ್ದಾಗ್ಯೂ ಈ ವರೆಗೆ ಹಣ ಪಾವತಿಯಾಗಿರುವುದಿಲ್ಲ ಎಂದು ಸಭೆಯ ಗಮನಕ್ಕೆ ತಂದರು. ಪ್ರತಿಯಾಗಿ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಯವರು, ಸದರಿ ಕಾಮಗಾರಿಯು ಕ್ರಿಯಾಯೋಜನೆಯಲ್ಲಿ ಸೇರ್ಪಡೆ ಯಾಗಿದ್ದಲ್ಲಿ ಹಣ ಪಾವತಿಗೆ ವ್ಯವಸ್ಥೆ ಮಾಡಲೇಬೇಕಾಗುತ್ತದೆಯಾದ್ದರಿಂದ ಸದರಿ ಕಾಮಗಾರಿಗಳನ್ನು ಸೇರಿಸಿಕೊಂಡು ಕ್ರಿಯಾಯೋಜನೆ ಮಾಡಲಾಗುವುದು ಎಂದು ತಿಳಿಸಿದರು.

ಜಿ.ಪಂ.ಮಾನ್ಯ ಸದಸ್ಯರಾದ ಶ್ರೀ ಚಂದ್ರಶೇಖರಬಾಬುರವರು, ಕುಡಿಯುವ ನೀರು ಯೋಜನೆಗೆ ಸಂಬಂಧಿಸಿದಂತೆ (ಮೋಟಾರ್ ಮತ್ತು ಪೈಪ್ಲೈನ್) ಸಾಮಗ್ರಿ ಬಿಲ್ ಪಾವತಿಸಿರುವುದಿಲ್ಲ; ಇದರಿಂದ ಸಂಬಂಧಪಟ್ಟ ಏಜೆನ್ಸಿಯವರು ಮೋಟಾರ್ ವಾಪಸ್ ಎತ್ತಿಕೊಳ್ಳುತ್ತೇವೆ ಎನ್ನುತ್ತಾರೆ; ಕಾರ್ಯಪಾಲಕ ಇಂಜಿನಿಯರ್, ಪಂ.ರಾ.ಇಂ.ವಿಭಾಗ, ತುಮಕೂರು ಇವರನ್ನು ಕೇಳಲಾಗಿ Spill overಅಡಿ ಪರಿಗಣಿಸಿ ಬಿಲ್ ಪಾವತಿಸುವುದಾಗಿ ತಿಳಿಸುತ್ತಾರೆ, ಈ ಕುರಿತು ಸ್ಪಷ್ಟ ಮಾಹಿತಿ ನೀಡಬೇಕು ಎಂದು ಸಭೆಯ ಗಮನಕ್ಕೆ ತಂದರು.

ಕಾರ್ಯಪಾಲಕ ಇಂಜಿನಿಯರ್, ಪಂ.ರಾ.ಇಂ.ವಿಭಾಗ, ತುಮಕೂರು ಇವರು, 3-4ನೇ ಹಂತದಲ್ಲಿ ಕೈಗೊಂಡ ಕಾಮಗಾರಿಗಳ ಬಿಲ್ ಗಳನ್ನು ಈಗಾಗಲೇ ಪಾವತಿಸಲಾಗಿದೆ; ಈಗ 5ನೇ ಹಂತದ ಕಾಮಗಾರಿಗಳನ್ನು ಕೈಗೆತ್ತಿಕೊಳ್ಳಲಾಗಿದೆ; ಈ ಕುರಿತು ಪರಿಶೀಲಿಸಿ ಬಿಲ್ ಪಾವತಿಸಲಾಗುವುದು ಎಂದು ತಿಳಿಸಿದರಲ್ಲದೆ, ಈ ಸಾಲಿಗೆ ಬಿಡುಗಡೆಯಾಗಿರುವ ಅನುದಾನವನ್ನು ಈಗಾಗಲೇ ಎಲ್ಲಾ ಸಹಾಯಕ ಕಾರ್ಯಪಾಲಕ ಇಂಜಿನಿಯರ್ ಗಳಿಗೆ ಹಂಚಿಕೆ ಮಾಡಲಾಗಿದ್ದು, ಯಾವುದೇ ಕಾಮಗಾರಿ ಪುನರಾವರ್ತನೆಯಾಗದಂತೆ ಅತ್ಯಂತ ಎಚ್ಚರವಹಿಸಿ ಕೆಲಸ ಮಾಡಲಾಗುವುದೆಂದೂ ಸಹ ಸಭೆಗೆ ತಿಳಿಸಿದರು.

ನಂತರ, RTGS ಮೂಲಕ 80% ಬಿಲ್ ಪಾವತಿಯಾಗಿದ್ದು, ಪಾವತಿಗೆ ಬಾಕಿಯಿರುವ ಅನುದಾನವನ್ನು ಅಪ್ ಲೋಡ್ ಮಾಡಿ ಈ ಸಾಲಿಗೆ expenditure book ಮಾಡಿ ಎಲ್ಲ ಕಾಮಗಾರಿಗಳ ಬಿಲ್ ಗಳನ್ನು ಪೂರ್ಣಪ್ರಮಾಣದಲ್ಲಿ ಪಾವತಿಸಲಾಗುವುದು ಎಂದು ಸಭೆಗೆ ತಿಳಿಸಿದರು.

ಜಿ.ಪಂ.ಮಾನ್ಯ ಸದಸ್ಯರಾದ ಶ್ರೀ ವೈ.ಹೆಚ್.ಹುಚ್ಚಯ್ಯನವರು, ಕಳೆದ ಸಾಲಿನ ವಿವಿಧ ಯೋಜನೆಗಳಡಿ ಅನುದಾನ ವ್ಯಪಗತವಾಗಿರುವ ಕುರಿತು ಪ್ರಶ್ನಿಸಿದರು. ಪ್ರತಿಯಾಗಿ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಯವರು, ಯಾವುದೇ ಯೋಜನೆಗಳಡಿ ಅನುದಾನ ವ್ಯಪಗತವಾಗಿರುವುದಿಲ್ಲ, ಆದರೆ ಕಳೆದ ಸಾಲಿನಲ್ಲಿ ಖಾಲಿ ಹುದ್ದೆಗಳು

ಯಾವೂ ಭರ್ತಿಯಾಗದ ಕಾರಣ ಸದರಿ ಹುದ್ದೆಗಳಿಗೆ ಎದುರಾಗಿ ವೇತನಾಂಶಕ್ಕಾಗಿ ಬಿಡುಗಡೆಯಾಗಿದ್ದ ಅನುದಾನ ಮಾತ್ರ ಸರ್ಕಾರಕ್ಕೆ ವಾಪಸ್ ಆಗಿರುತ್ತದೆ ಎಂದು ಸ್ಪಷ್ಟಪಡಿಸಿದರು.

ನಂತರ, ಈ ಬಾರಿಯ ಎಸ್.ಎಸ್.ಎಲ್.ಸಿ. ಪರೀಕ್ಷೆಯಲ್ಲಿ ಮಧುಗಿರಿ ಶೈಕ್ಷಣಿಕ ಜಿಲ್ಲೆ 5ನೇ ಸ್ಥಾನ ಮತ್ತು ತುಮಕೂರು ಶೈಕ್ಷಣಿಕ ಜಿಲ್ಲೆ 9ನೇ ಸ್ಥಾನ ಪಡೆಯುವುದರ ಮೂಲಕ ತುಮಕೂರು ಜಿಲ್ಲೆ ಅತ್ಯುತ್ತಮ ಫಲಿತಾಂಶ ಪಡೆಯಲು ಕಾರಣಕರ್ತರಾದ ಶಿಕ್ಷಣ ಇಲಾಖೆಯ ಡಿ.ಡಿ.ಪಿ.ಐ.ಗಳು, ಬಿ.ಇ.ಓ.ಗಳು, ವಿದ್ಯಾರ್ಥಿಗಳು, ಪೋಷಕರು, ಶಿಕ್ಷಕರು, ಇತರೆ ಅಧಿಕಾರಿಗಳು ಹಾಗೂ ಸಂಬಂಧಪಟ್ಟ ಎಲ್ಲರನ್ನೂ ಅಭಿನಂದಿಸಿದರು. ಹಾಗೆಯೇ, ದಿನಾಂಕ 31-05-2014ರಂದು ಸರ್ಕಾರಿ ಸೇವೆಯಿಂದ ವಯೋನಿವೃತ್ತಿ ಹೊಂದುತ್ತಿರುವ ಶ್ರೀ ಆಂಜಿನಪ್ಪ, ಉಪನಿರ್ದೇಶಕರು, ಸಾರ್ವಜನಿಕ ಶಿಕ್ಷಣ ಇಲಾಖೆ, ಮಧುಗಿರಿ ಇವರು ಉತ್ತಮ ಸೇವೆ ಸಲ್ಲಿಸಿದ್ದು, ಅವರ ನಿವೃತ್ತ ಜೀವನ ಸುಗಮವಾಗಿರಲೆಂದು ಮನ:ಪೂರ್ವಕವಾಗಿ ಹಾರೈಸಿದರು.

ಜಿ.ಪಂ.ಮಾನ್ಯ ಸದಸ್ಯರಾದ ಶ್ರೀ ಚಂದ್ರಶೇಖರಬಾಬುರವರು, ಸಾರ್ವಜನಿಕ ಶಿಕ್ಷಣ ಇಲಾಖೆಯ ವೈದ್ಯಕೀಯ ವೆಚ್ಚ ಮರುಪಾವತಿ ಪ್ರಸ್ತಾವನೆಗಳು ಕಳೆದ ನವೆಂಬರ್ ಮಾಹೆಯಿಂದ ಬಾಕಿಯಿರುವ ಬಗ್ಗೆ ತೀವ್ರ ಆಕ್ಷೇಪ ವ್ಯಕ್ತಪಡಿಸಿದರು. ಪ್ರತಿಯಾಗಿ ಮುಖ್ಯ ಲೆಕ್ಕಾಧಿಕಾರಿಯವರು, ಮಾನ್ಯ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಯವರಿಂದ (with OMs) ಬಂದ ಪ್ರಸ್ತಾವನೆಗಳನ್ನು clear ಮಾಡಲಾಗಿದೆ; ಉಳಿಕೆ ಅನುದಾನ ಸರ್ಕಾರದಿಂದ ಈ ವಾರದಲ್ಲೇ ತಾಲ್ಲೂಕು ಪಂಚಾಯತ್ ಮತ್ತು ಜಿಲ್ಲಾ ಪಂಚಾಯತ್ ಗೆ ಬಿಡುಗಡೆಯಾಗಲಿದೆ; ಅನುದಾನ ಬಂದ ಕೂಡಲೇ ಎಲ್ಲ ಪ್ರಸ್ತಾವನೆಗಳನ್ನೂ clear ಮಾಡಲಾಗುವುದು; ಕಳೆದ ಸಾಲಿನಲ್ಲಿ ವೈದ್ಯಕೀಯ ವೆಚ್ಚ ಮರುಪಾವತಿಗಾಗಿ ತಾಲ್ಲೂಕು ಪಂಚಾಯತ್ ಗಳಿಗೆ ಮತ್ತು ಜಿಲ್ಲಾ ಪಂಚಾಯತ್ ಗೆ ಅನುದಾನವನ್ನು ಸರ್ಕಾರವು ಬಿಡುಗಡೆ ಮಾಡಿತ್ತು; ವೈದ್ಯಕೀಯ ವೆಚ್ಚ ಮರುಪಾವತಿಗಾಗಿಯೇ ಪ್ರತ್ಯೇಕ ಲೆಕ್ಕ ಶೀರ್ಷಿಕೆ ಇರುವುದರಿಂದ, ಇತರೆ ಲೆಕ್ಕಶೀರ್ಷಿಕೆಗಳಡಿ ಅವಕಾಶವಿರುವುದಿಲ್ಲ ಎಂದು ಸಭೆಗೆ ಸ್ಪಷ್ಟಪಡಿಸಿದರು.

ಮಾನ್ಯ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಯವರು, ವೇತನಾನುದಾನದಂತೆ ವೈದ್ಯಕೀಯ ವೆಚ್ಚ ಮರುಪಾವತಿ ಅನುದಾನವೂ ಸಹ ತ್ರೈಮಾಸಿಕವಾಗಿ 4 ಕಂತುಗಳಲ್ಲಿ ಬಿಡುಗಡೆಯಾಗುತ್ತದೆ; ಅದರಲ್ಲಿಯೂ ತಾತ್ಕಾಲಿಕ ಸರಾಸರಿ ಲೆಕ್ಕ ಹಾಕಿ ಭಾಗಶ: ಮೊತ್ತವನ್ನು ಬಿಡುಗಡೆ ಮಾಡುತ್ತಾರೆ; ಹೀಗಾಗಿ, 6-8 ತಿಂಗಳು ವಿಳಂಬವಾಗುತ್ತಿದೆ; ಪ್ರಸ್ತುತ ಹೆಚ್ಚಿನ ಅನುದಾನ ನೀಡುವಂತೆ ಸರ್ಕಾರವನ್ನು ಕೋರಲಾಗಿದೆ; ಎಷ್ಟೋ ಖಾಯಿಲೆಗಳ ಚಿಕಿತ್ಸೆಗಳಿಗೆ ಮುಂಗಡ ನೀಡಲಾಗುತ್ತಿದೆ(Heart operation, Kidney problem, etc.,); ಹಾಗೆಯೇ ಅತ್ಯಂತ ತುರ್ತು ಚಿಕಿತ್ಸೆ ಅಗತ್ಯವಿರುವ ತೀವ್ರತರದ ಖಾಯಿಲೆಗಳ ಪ್ರಕರಣಗಳಿಗೆ(Cancer etc.,) ತುರ್ತಾಗಿ ಹಣ ನೀಡಲಾಗುತ್ತಿದೆ ಎಂದು ಸಭೆಗೆ ವಿವರಿಸಿದರು.

ಜಿ.ಪಂ.ಮಾನ್ಯ ಸದಸ್ಯರಾದ ಶ್ರೀ ಸಿ.ಆರ್.ಉಮೇಶ್ ರವರು, ಬಿ.ಸಿ.ಎಂ.ಇಲಾಖೆಯ ವಿದ್ಯಾಸಿರಿ ಮತ್ತು ಹೆಚ್ಚುವರಿ ಭೋಜನ ವೆಚ್ಚಗಳ ಉಳಿಕೆ ಹಣವನ್ನು ವೈದ್ಯಕೀಯ ವೆಚ್ಚ ಮರುಪಾವತಿಗೆ ಬಳಸಬಹುದು ಅಥವಾ ಹೊಸದಾಗಿ ಹೆಣ್ಣುಮಕ್ಕಳ ಹಾಸ್ಟೆಲ್ ಗಳನ್ನು ತೆರೆಯಲು ಬಳಸಬಹುದು ಎಂದು ಅಭಿಪ್ರಾಯ ವ್ಯಕ್ತಪಡಿಸಿದರು. ಪ್ರತಿಯಾಗಿ ಜಿಲ್ಲಾ ಅಧಿಕಾರಿ, ಬಿ.ಸಿ.ಎಂ.ರವರು, ಲೆಕ್ಕಶೀರ್ಷಿಕೆ ಬದಲಾವಣೆಗೆ ಕ್ರಮವಹಿಸಿರುವುದಾಗಿ ಸಭೆಯ ಗಮನಕ್ಕೆ ತಂದರು.

ಜಿ.ಪಂ.ಮಾನ್ಯ ಸದಸ್ಯರಾದ ಶ್ರೀಮತಿ ಲೋಹಿತಾಬಾಯಿಯವರು, ಚಿಕ್ಕನಾಯಕನಹಳ್ಳಿಯಲ್ಲಿ ಜಿಲ್ಲಾ ಸಮಾಜ ಕಲ್ಯಾಣ ಇಲಾಖೆ ವತಿಯಿಂದ ನಡೆಯುತ್ತಿರುವ ಎಸ್.ಸಿ/ಎಸ್.ಟಿ ಹೆಣ್ಣುಮಕ್ಕಳ ಹಾಸ್ಟೆಲ್ ಸರಿಯಾದ

ಜಾಗದಲ್ಲಿ ನಡೆಯುತ್ತಿಲ್ಲವೆಂದು ಸದರಿ ಹಾಸ್ಟೆಲ್ ನ ಮಕ್ಕಳು ತಮ್ಮಲ್ಲಿ ದೂರುತ್ತಿರುವುದಾಗಿ ಸಭೆಯ ಗಮನಕ್ಕೆ ತಂದರು. ಪ್ರತಿಯಾಗಿ ಜಿಲ್ಲಾ ಸಮಾಜ ಕಲ್ಯಾಣಾಧಿಕಾರಿಯವರು, ಸದರಿ ಹಾಸ್ಟೆಲ್ ನ್ನು ಬೇರೆ ಜಾಗಕ್ಕೆ ಸ್ಥಳಾಂತರಿಸುವುದಾಗಿ ಭರವಸೆಯಿತ್ತರು.

ಮಾನ್ಯ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಯವರು, ಪ್ರಸಕ್ತ ಸರ್ಕಾರ ಸಮಾಜ ಕಲ್ಯಾಣ ಮತ್ತು ಬಿ.ಸಿ.ಎಂ.ಹಾಸ್ಟೆಲ್ ಗಳಿಗೆ ಹೆಚ್ಚಿನ ಒತ್ತು ನೀಡುತ್ತಿದೆ; ಕಳೆದ ಎಂಟು ವರ್ಷಗಳಿಂದೀಚೆಗೆ ಸಮಸ್ಯೆ ಸಾಕಷ್ಟು ಸುಧಾರಣೆಯಾಗಿದೆ; ಪ್ರಸ್ತುತ 9 ಹಾಸ್ಟೆಲ್ ಗಳು ಬಾಡಿಗೆ ಕಟ್ಟಡದಲ್ಲಿ ನಡೆಯುತ್ತಿದ್ದು, 4 ಹಾಸ್ಟೆಲ್ ಗಳಿಗೆ ನಿವೇಶನ ಸಿಕ್ಕಿದೆ; ಉಳಿದ ಹಾಸ್ಟೆಲ್ ಗಳಿಗೆ ನಿವೇಶನ ದೊರೆತಲ್ಲಿ ಖರೀದಿಗೆ ಸರ್ಕಾರ ಹಣ ನೀಡಲು ಸಿದ್ಧವಿದೆ ಎಂದು ಸಭೆಗೆ ತಿಳಿಸಿದರು.

ಜಿ.ಪಂ.ಮಾನ್ಯ ಸದಸ್ಯರಾದ ಶ್ರೀ ಉಗ್ರಯ್ಯನವರು, ತುರುವೇಕೆರೆ ತಾಲ್ಲೂಕು ಬಾಣಸಂದ್ರ ಗ್ರಾಮ ಪಂಚಾಯಿತಿಯಲ್ಲಿ ಬಿ.ಸಿ.ಎಂ.ಇಲಾಖಾ ವತಿಯಿಂದ ನಡೆಯುತ್ತಿರುವ ಪ್ರೀ-ಮೆಟ್ರಿಕ್ ಹಾಸ್ಟೆಲ್ ಪ್ರಸ್ತುತ ಹಳೆಯ ಹೆಂಚಿನ ಕಟ್ಟಡದಲ್ಲಿ ನಡೆಯುತ್ತಿದೆ; ಸದರಿ ಗ್ರಾಮದಲ್ಲಿ 4-5 ಎಕರೆ ಸರ್ಕಾರಿ ಜಾಗವಿದ್ದು, ಎರಡು ವರ್ಷಗಳಿಂದ ಪ್ರಸ್ತಾಪಿಸಲಾಗಿ, ಸದರಿ ಜಾಗವು ಗೋಮಾಳವೆಂದು ತಿಳಿಸಿ ಪ್ರಸ್ತಾವನೆಯನ್ನು ಹಿಂದಿರುಗಿಸಿರುತ್ತಾರೆ; ಜಾಗ ಕೊಟ್ಟರೆ ಕಟ್ಟಡ ನಿರ್ಮಾಣಕ್ಕೆ ಅನುಕೂಲವಾಗುತ್ತದೆ ಎಂದು ಸಭೆಗೆ ವಿವರಿಸಿದರು.

ಜಿ.ಪಂ.ಮಾನ್ಯ ಸದಸ್ಯರಾದ ಡಾ: ರವಿ ನಾಗರಾಜಯ್ಯನವರು, ಗೋಮಾಳವಿದ್ದಲ್ಲಿ ಭೂ ಪರಿವರ್ತನಾ ಕಾಯ್ದೆಯ ಸೆಕ್ಷನ್ 19ರಡಿ ಭೂ ಪರಿವರ್ತನೆಗೆ ಅವಕಾಶವಿರುವುದರಿಂದ ಆ ಮೇರೆಗೆ ಸರ್ಕಾರಕ್ಕೆ ವರದಿ ಸಲ್ಲಿಸಿ ಭೂ ಪರಿವರ್ತನೆ ಮಾಡಿಸಬಹುದು ಎಂದು ತಿಳಿಸಿದರು.

ಜಿ.ಪಂ. ಮಾನ್ಯ ಉಪಾಧ್ಯಕ್ಷರು, ಅವರ ಅಧಿಕಾರಾವಧಿಯಲ್ಲಿ ಉತ್ತಮ ಸಹಕಾರ ನೀಡಿದ್ದಕ್ಕಾಗಿ ಎಲ್ಲಾ ಅಧಿಕಾರಿಗಳನ್ನೂ ವೈಯಕ್ತಿಕವಾಗಿ ಅಭಿನಂದಿಸಿದರು.

ಜಿ.ಪಂ.ಮಾನ್ಯ ಸದಸ್ಯರಾದ ಶ್ರೀ ಸಿ.ಆರ್.ಉಮೇಶ್ ರವರು, ಜಿಲ್ಲಾ ಪಂಚಾಯತ್ ಕೇಂದ್ರ ಕಛೇರಿ ಕಟ್ಟಡದ ಎರಡನೆ ಅಂತಸ್ತಿನ ಕಾಮಗಾರಿಯನ್ನು ತ್ವರಿತವಾಗಿ ಪೂರ್ಣಗೊಳಿಸಲು ಕ್ರಮವಹಿಸುವಂತೆ ಕೋರಿದರು. ಚರ್ಚೆಯ ನಂತರ, ದಿನಾಂಕ 25-06-2014ರೊಳಗೆ ಕಾಮಗಾರಿ ಪೂರ್ಣಗೊಳಿಸಿ ಮುಂದಿನ ಸಾಮಾನ್ಯ ಸಭೆಯ ವೇಳೆಗೆ ಕಟ್ಟಡ ಪುರಂಭೋತ್ಸವಕ್ಕೆ ವ್ಯವಸ್ಥೆಗೊಳಿಸುವುದಾಗಿ ಯೋಜನಾ ವ್ಯವಸ್ಥಾಪಕರು, ನಿರ್ಮಿತಿ ಕೇಂದ್ರ, ತುಮಕೂರು ಇವರು ಸಭೆಗೆ ತಿಳಿಸಿದರು.

ಜಿ.ಪಂ. ಮಾನ್ಯ ಅಧ್ಯಕ್ಷರು, ಅವರ ಅಧಿಕಾರಾವಧಿಯಲ್ಲಿ ಉತ್ತಮ ಸಹಕಾರ ನೀಡಿದ್ದಕ್ಕಾಗಿ ಮಾನ್ಯ ಉಪಾಧ್ಯಕ್ಷರಿಗೆ, ಎಲ್ಲಾ ಅಧಿಕಾರಿಗಳಿಗೆ ಮತ್ತು ಜಿಲ್ಲಾ ಪಂಚಾಯತ್ ಸದಸ್ಯರುಗಳಿಗೆ ವೈಯಕ್ತಿಕವಾಗಿ ಧನ್ಯವಾದ ತಿಳಿಸಿದರು.

ಸುಧೀರ್ಘ ಚರ್ಚೆಯ ನಂತರ 2014-15ನೇ ಸಾಲಿನ ಜಿಲ್ಲಾ ಪಂಚಾಯತ್ ವ್ಯಾಪ್ತಿಗೊಳಪಡುವ ಎಲ್ಲಾ ಇಲಾಖೆಗಳ ವಾರ್ಷಿಕ ಕ್ರಿಯಾಯೋಜನೆಯನ್ನು ಸಭೆಯು ಸರ್ವಾನುಮತದಿಂದ ಅನುಮೋದಿಸಿತು.

ವಿಷಯ ಸೂಚಿ 2 :- ಜಿಲ್ಲೆಯಲ್ಲಿ ಪ್ರಸ್ತುತ ಕುಡಿಯುವ ನೀರಿನ ಸಮಸ್ಯೆ ಬಗ್ಗೆ.

ಮೊದಲಿಗೆ ಜಿ.ಪಂ.ಮಾನ್ಯ ಸದಸ್ಯರಾದ ಶ್ರೀಮತಿ ವಸಂತಮ್ಮನವರು, ಗ್ರಾಮೀಣ ಜನತೆಗೆ ಕುಡಿಯುವ ನೀರು ಒದಗಿಸಲು ಯಾವ ಯಾವ ಗ್ರಾಮ ಪಂಚಾಯಿತಿಗಳಲ್ಲಿ ಯಾವ-ಯಾವ ಕಾಮಗಾರಿಗಳನ್ನು

ಕೈಗೆತ್ತಿಕೊಳ್ಳಲಾಗಿದೆ ಮತ್ತು ಅದಕ್ಕಾಗಿ ಎಷ್ಟು ಹಣವನ್ನು ಖರ್ಚು ಮಾಡಲಾಗಿದೆ ಎಂಬ ಬಗ್ಗೆ ಮಾನ್ಯ ಮುಖ್ಯ ಕಾರ್ಯ ನಿರ್ವಾಹಕ ಅಧಿಕಾರಿಯವರು ಸಭೆಗೆ ಉತ್ತರ ನೀಡಬೇಕು ಎಂದು ಕೋರಿದರು.

ಚರ್ಚೆಯ ನಂತರ, ವಿವರ ನೀಡುವಂತೆ ಸಂಬಂಧಿಸಿದ ತಾಲ್ಲೂಕುಗಳ ಸಹಾಯಕ ಕಾರ್ಯಪಾಲಕ ಇಂಜಿನಿಯರ್ ಗಳಿಗೆ ತಿಳಿಸಲಾಯಿತು

ವಿಷಯ ಸೂಚಿ 3 :- ಜಿಲ್ಲಾ ಪಂಚಾಯತ್ ವಿವಿಧ ಸ್ಥಾಯಿ ಸಮಿತಿಗಳ ನಿರ್ಣಯಗಳನ್ನು ಅನುಮೋದಿಸುವ ಬಗ್ಗೆ.

a) ದಿನಾಂಕ:17-05-2014ರಂದು ನಡೆದ ಹಣಕಾಸು ಲೆಕ್ಕಪರಿಶೋಧನಾ ಮತ್ತು ಯೋಜನಾ ಸ್ಥಾಯಿ ಸಮಿತಿ ಸಭೆಯ ನಿರ್ಣಯಗಳು.

ಹಣಕಾಸು ಲೆಕ್ಕಪರಿಶೋಧನಾ ಮತ್ತು ಯೋಜನಾ ಸ್ಥಾಯಿ ಸಮಿತಿಯ ಕಾರ್ಯದರ್ಶಿಯವರು, ದಿನಾಂಕ:17-05-2014ರಂದು ನಡೆದ ಹಣಕಾಸು ಲೆಕ್ಕಪರಿಶೋಧನಾ ಮತ್ತು ಯೋಜನಾ ಸ್ಥಾಯಿ ಸಮಿತಿ ಸಭೆಯ ನಿರ್ಣಯಗಳನ್ನು ಅನುಮೋದನೆಗಾಗಿ ಸಭೆಗೆ ಮಂಡಿಸಿದರು. ಕೂಲಂಕುಷವಾಗಿ ಪರಿಶೀಲಿಸಿದ ನಂತರ ಸದರಿ ನಿರ್ಣಯಗಳನ್ನು ಸಭೆಯು ಸರ್ವಾನುಮತದಿಂದ ಅನುಮೋದಿಸಿತು.

b) ದಿನಾಂಕ:20-05-2014ರಂದು ನಡೆದ ಶಿಕ್ಷಣ ಮತ್ತು ಆರೋಗ್ಯ ಸ್ಥಾಯಿ ಸಮಿತಿ ಸಭೆಯ ನಿರ್ಣಯಗಳು.

ಶಿಕ್ಷಣ ಮತ್ತು ಆರೋಗ್ಯ ಸ್ಥಾಯಿ ಸಮಿತಿಯ ಮಾನ್ಯ ಅಧ್ಯಕ್ಷರು, ದಿನಾಂಕ:20-05-2014ರಂದು ನಡೆದ ಶಿಕ್ಷಣ ಮತ್ತು ಆರೋಗ್ಯ ಸ್ಥಾಯಿ ಸಮಿತಿ ಸಭೆಯ ನಿರ್ಣಯಗಳನ್ನು ಅನುಮೋದನೆಗಾಗಿ ಸಭೆಗೆ ಮಂಡಿಸಿದರು. ಕೂಲಂಕುಷವಾಗಿ ಪರಿಶೀಲಿಸಿದ ನಂತರ ಸದರಿ ನಿರ್ಣಯಗಳನ್ನು ಸಭೆಯು ಸರ್ವಾನುಮತ ದಿಂದ ಅನುಮೋದಿಸಿತು.

c) ದಿನಾಂಕ:21-05-2014ರಂದು ನಡೆದ ಸಾಮಾನ್ಯ ಸ್ಥಾಯಿ ಸಮಿತಿ ಸಭೆಯ ನಿರ್ಣಯಗಳು.

ಸಾಮಾನ್ಯ ಸ್ಥಾಯಿ ಸಮಿತಿಯ ಕಾರ್ಯದರ್ಶಿಯವರು, ದಿನಾಂಕ:21-05-2014ರಂದು ನಡೆದ ಸಾಮಾನ್ಯ ಸ್ಥಾಯಿ ಸಮಿತಿ ಸಭೆಯ ನಿರ್ಣಯಗಳನ್ನು ಅನುಮೋದನೆಗಾಗಿ ಸಭೆಗೆ ಮಂಡಿಸಿದರು. ಕೂಲಂಕುಷವಾಗಿ ಪರಿಶೀಲಿಸಿದ ನಂತರ ಸದರಿ ನಿರ್ಣಯಗಳನ್ನು ಸಭೆಯು ಸರ್ವಾನುಮತದಿಂದ ಅನುಮೋದಿಸಿತು.

d) ದಿನಾಂಕ: 22-05-2014ರಂದು ನಡೆದ ಸಾಮಾಜಿಕ ನ್ಯಾಯ ಸ್ಥಾಯಿ ಸಮಿತಿ ಸಭೆಯ ನಿರ್ಣಯಗಳು.

ಸಾಮಾಜಿಕ ನ್ಯಾಯ ಸ್ಥಾಯಿ ಸಮಿತಿಯ ಮಾನ್ಯ ಅಧ್ಯಕ್ಷರು, ದಿನಾಂಕ 22-05-2014 ರಂದು ನಡೆದ ಸಾಮಾಜಿಕ ನ್ಯಾಯ ಸ್ಥಾಯಿ ಸಮಿತಿ ಸಭೆಯ ನಿರ್ಣಯಗಳನ್ನು ಅನುಮೋದನೆಗಾಗಿ ಸಭೆಗೆ ಮಂಡಿಸಿದರು. ಕೂಲಂಕುಷವಾಗಿ ಪರಿಶೀಲಿಸಿದ ನಂತರ ಸದರಿ ನಿರ್ಣಯಗಳನ್ನು ಸಭೆಯು ಸರ್ವಾನುಮತದಿಂದ ಅನುಮೋದಿಸಿತು.

e) ದಿನಾಂಕ:24-05-2014ರಂದು ನಡೆದ ಕೃಷಿ ಮತ್ತು ಕೈಗಾರಿಕೆ ಸ್ಥಾಯಿ ಸಮಿತಿ ಸಭೆಯ ನಿರ್ಣಯಗಳು.

ಕೃಷಿ ಮತ್ತು ಕೈಗಾರಿಕೆ ಸ್ಥಾಯಿ ಸಮಿತಿಯ ಮಾನ್ಯ ಅಧ್ಯಕ್ಷರು, ದಿನಾಂಕ 24-05-2014 ರಂದು ನಡೆದ ಕೃಷಿ ಮತ್ತು ಕೈಗಾರಿಕೆ ಸ್ಥಾಯಿ ಸಮಿತಿ ಸಭೆಯ ನಿರ್ಣಯಗಳನ್ನು ಅನುಮೋದನೆಗಾಗಿ ಸಭೆಗೆ ಮಂಡಿಸಿದರು. ಕೂಲಂಕುಷವಾಗಿ ಪರಿಶೀಲಿಸಿದ ನಂತರ ಸದರಿ ನಿರ್ಣಯಗಳನ್ನು ಸಭೆಯು ಸರ್ವಾನುಮತದಿಂದ ಅನುಮೋದಿಸಿತು.

ವಿಷಯ ಸೂಚಿ 4 :- ದಿನಾಂಕ : 24-02-2014 ರಂದು ನಡೆದ ಜಿಲ್ಲಾ ಪಂಚಾಯತ್ ಸಾಮಾನ್ಯ ಸಭೆಯ ನಡವಳಿಯ ಅನುಪಾಲನ ವರದಿ ಬಗ್ಗೆ.

ದಿನಾಂಕ:24-02-2014ರಂದು ನಡೆದ ಜಿಲ್ಲಾ ಪಂಚಾಯತ್ ಸಾಮಾನ್ಯ ಸಭೆಯ ನಡವಳಿಯ ಅನ್ವಯ ಕೈಗೊಂಡ ಕ್ರಮದ ಬಗೆಗಿನ ಅನುಪಾಲನಾ ವರದಿಯನ್ನು ಕೂಲಂಕುಷವಾಗಿ ಪರಿಶೀಲಿಸಿದ ನಂತರ ಸದರಿ ವರದಿಯನ್ನು ಸಭೆಯು ಸರ್ವಾನುಮತದಿಂದ ಅಂಗೀಕರಿಸಿತು.

ಮಾನ್ಯ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಯವರು ಮಾತನಾಡಿ, ಯಾವುದೇ ಯೋಜನೆ/ಲೆಕ್ಕ ಶೀರ್ಷಿಕೆಯಡಿ ಅನುದಾನ ವ್ಯಪಗತವಾಗದಂತೆ ಜಿಲ್ಲಾಮಟ್ಟದ ಎಲ್ಲಾ ಅಧಿಕಾರಿಗಳು ಎಚ್ಚರವಹಿಸಿ ಉತ್ತಮ ಆರ್ಥಿಕ ಪ್ರಗತಿ ಸಾಧಿಸಿ, ಪೂರ್ಣ ಪ್ರಮಾಣದ ಅನುದಾನವನ್ನು ಖರ್ಚುಮಾಡಬೇಕು ಎಂದು ತಿಳಿಸಿದರು.

5. ಅಧ್ಯಕ್ಷರ ಅಪ್ಪಣೆ ಮೇರೆಗೆ ಬರುವ ಇತರೆ ವಿಷಯಗಳು:-

2013-14ನೇ ಸಾಲಿನ ಕ್ರೋಢೀಕೃತ ವಾರ್ಷಿಕ ಲೆಕ್ಕ ಪತ್ರಗಳನ್ನು ಮುಖ್ಯ ಲೆಕ್ಕಾಧಿಕಾರಿಯವರು ಸಭೆಗೆ ಮಂಡಿಸುತ್ತಾ, ಸಭೆಯು ಅನುಮೋದನೆ ನೀಡಬೇಕೆಂದು ಕೋರಿದರು. ಅದರಂತೆ, ಸದರಿ ವಾರ್ಷಿಕ ಲೆಕ್ಕ ಪತ್ರಗಳಲ್ಲಿನ ಅಂಕಿ-ಅಂಶಗಳನ್ನು ಕೂಲಂಕುಷವಾಗಿ ಪರಿಶೀಲಿಸಿದ ನಂತರ ಸಭೆಯು, 2013-14ನೇ ಸಾಲಿನ ಕ್ರೋಢೀಕೃತ ವಾರ್ಷಿಕ ಲೆಕ್ಕಪತ್ರಗಳನ್ನು ಸರ್ವಾನುಮತದಿಂದ ಅನುಮೋದಿಸಿತು.

(ಕ್ರಮ : ಮುಖ್ಯ ಲೆಕ್ಕಾಧಿಕಾರಿ, ಜಿಲ್ಲಾ ಪಂಚಾಯತ್, ತುಮಕೂರು)

ಚರ್ಚಿಸತಕ್ಕ ವಿಷಯಗಳು ಮುಕ್ತಾಯಗೊಂಡಿದ್ದರಿಂದ ವಂದನಾರ್ಪಣೆಯೊಂದಿಗೆ ಸಭೆಯನ್ನು ಮುಕ್ತಾಯಗೊಳಿಸ ಲಾಯಿತು.

ಅಧ್ಯಕ್ಷರು,
ಜಿಲ್ಲಾ ಪಂಚಾಯತ್,
ತುಮಕೂರು.